ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.


# ತಪೋವಾಣಿ

ಸಂಪುಟ 15 ಸಂಚಿಕೆ 5 | ಮೇ 2018 | ರೂ.25


## ಅನಿಸಿಕೆಗಳು

### ಗುರೂಜಿ ಕೃಷ್ಣಾನಂದ

**ಅನು: ಚಂಪ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜೂನ್ 1995ರ ಸಂಚಿಕೆ)

ಏಳು ವರ್ಷಗಳ ಹಿಂದೆ ನಾನು ಧ್ಯಾನದ ತರಗತಿಯನ್ನು ಆರಂಭಿಸಿದೆ. ಅಂದಿನಿಂದ ಇಂದಿನವರೆಗೆ ನಾನು ನೂರಾರು ಜನರನ್ನು ಸುಪ್ತಪ್ರಜ್ಞೆಯಲ್ಲಿ ಮಾರ್ಗದರ್ಶಿಸಿದ್ದೇನೆ. ನನ್ನ ಚಟುವಟಿಕೆಯ ಒಂದು ಹಂತ ಮುಗಿದಿದೆ. ನಾನು ನನ್ನ ಎರಡನೆಯ ಹಂತದ ಕೆಲಸವನ್ನು ಆರಂಭಿಸುವ ಸಮಯದಲ್ಲಿ, ನನ್ನ ಹಿಂದಿನ ಹೋರಾಟಗಳು ಮತ್ತು ಸೋಲುಗೆಲುವುಗಳನ್ನು ವೀಕ್ಷಿಸಲು ಪ್ರಯತ್ನಿಸುತ್ತೇನೆ. ಇದು ಸದಾ ಬಹಳ ಉಪಯುಕ್ತವಾದ ಅಭ್ಯಾಸವಾಗಿದೆ. ನಾವು ನಮ್ಮ ಸೋಲುಗಳಿಂದ ಕಲಿಯಬಹುದು.

ಈ ಏಳು ವರ್ಷಗಳಲ್ಲಿ ಹಲವಾರು ಬದಲಾವಣೆಗಳಾಗಿವೆ. ಕಾಲ ಬದಲಾಗಿದೆ. ನಾವು ಹೊಸ ಯುಗದಲ್ಲಿ ಕಾಲಿರಿಸಿದ್ದೇವೆ ಹಾಗೂ ಪರಿವರ್ತನೆಗೊಳಿಸುವಂತಹ ಚೈತನ್ಯಗಳನ್ನು ಪಡೆಯುತ್ತಿದ್ದೇವೆ. ಇವೆಲ್ಲವುಗಳಿಂದಾಗಿ ನಮ್ಮ ಶರೀರಗಳಲ್ಲಿ ಬದಲಾವಣೆಗಳಾಗಿವೆ, ಆದ್ದರಿಂದ ಧ್ಯಾನದ ತಂತ್ರಗಳನ್ನು ಪರಿಷ್ಕರಿಸಿ ಅಭಿವೃದ್ಧಿಪಡಿಸಬೇಕಾಗಿದೆ. ನಾನು ಇವುಗಳನ್ನು ಅಧ್ಯಾತ್ಮ ವಿಜ್ಞಾನದಲ್ಲಿ ಪರಿಣಿತರಾದ ಋಷಿಗಳ ನೆರವಿನಿಂದ ಸಾಧಿಸಬಲ್ಲೆ. ನಮ್ಮ ವಿದ್ಯಾರ್ಥಿಗಳಿಗೆ ಆ ಋಷಿಗಳ ಅನುಭವ ಮತ್ತು ಮುಂದಾಲೋಚನೆಯ ಲಾಭ ಪಡೆಯುವ ಅವಕಾಶವಿದೆ.

ಈ ಏಳು ವರ್ಷಗಳು ನನ್ನ ಬಗ್ಗೆ ಮತ್ತು ನನ್ನ ಕೆಲಸದ ಬಗ್ಗೆ ಎಲ್ಲವನ್ನೂ ತೆರೆದಿಟ್ಟಿವೆ. ಋಷಿಗಳ ನೆರವಿನಿಂದ ಧ್ಯಾನ ಮಾಡುವ ವಿದ್ಯಾರ್ಥಿಗಳಿಗೆ ಕೇವಲ ಮಾರ್ಗದರ್ಶಿಸುವ ಮಟ್ಟದಿಂದ, ವಿದ್ಯಾರ್ಥಿಗಳ ಆಧ್ಯಾತ್ಮಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಮಟ್ಟದವರೆಗೆ ಮತ್ತು ಅವುಗಳಿಗೆ ಪರಿಹಾರ ಹುಡುಕುವ ಮಟ್ಟದವರೆಗೆ ಹಾಗೂ ಅಮರರವರು ಭೌತಿಕ ವಲಯದಲ್ಲಿದ್ದಾಗ ಅವರಿಂದ ಪಡೆದ ಅಧ್ಯಾತ್ಮ ವಿಜ್ಞಾನವನ್ನು ಕೇವಲ ವರ್ಗಾಯಿಸುವ ಮಟ್ಟದಿಂದ, ಉನ್ನತ ಲೋಕಗಳಲ್ಲಿರುವ ಋಷಿಗಳಿಂದ ಹೊಸ ಜ್ಞಾನವನ್ನು ಪಡೆದುಕೊಳ್ಳುವ ಮಟ್ಟದವರೆಗೆ ನಾನು ನನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ.

ಎರಡು ವರ್ಷಗಳ ಹಿಂದೆ ನಾನು ತಪೋನಗರದಲ್ಲಿ ವಾಸಮಾಡಲು ಬಂದಮೇಲೆ ನಂಬಲಾರದಷ್ಟು ಬದಲಾವಣೆಗಳು ಬಹಳ ವೇಗವಾಗಿ ಆಗಿವೆ. ನಾವು ಹೊಸ ಚೈತನ್ಯಗಳನ್ನು ಕೆಳತಂದಿದ್ದೇವೆ ಹಾಗೂ ಇಲ್ಲಿ ಹಲವಾರು ಅಧ್ಯಾತ್ಮಿಕ ಕ್ಷೇತ್ರಗಳನ್ನು ರಚಿಸಿ ಸೂಕ್ಷ್ಮ ಕೊಠಡಿಗಳಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿದ್ದೇವೆ. ಅನೇಕ ಉನ್ನತ ಜೀವಿಗಳು ವಾಸಿಸಲು ಯೋಗ್ಯವಾದ ರಚನೆಗಳನ್ನು ರಚಿಸಿ ಅವರು ಇಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟಿದ್ದೇವೆ. ತಪೋನಗರವು ಸೂಕ್ಷ್ಮಲೋಕದಿಂದ ಬರುವವರಿಗೆ ಕೇಂದ್ರಬಿಂದುವಾಗಿದೆ ಹಾಗೂ ಸೂಕ್ಷ್ಮಲೋಕದ ಜ್ಯೋತಿಜಾಲಕ್ಕೆ ಕೇಂದ್ರವಾಗಿದೆ. ಭೌತಿಕ ವಲಯದಲ್ಲೂ ಜಗದಾದ್ಯಂತ ಹರಡಿರುವ ಅನೇಕ ಜ್ಯೋತಿತಂಡಗಳೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗಿದೆ.

ಋಷಿಗಳು ನನಗೆ ಉನ್ನತ ಅಧ್ಯಾತ್ಮ ಮಟ್ಟದಲ್ಲಿ ದೀಕ್ಷೆ ಕೊಟ್ಟರು. ನಂತರ ನಾನು ಹಲವಾರು ಲೋಕಗಳಲ್ಲಿ, ಮಾರ್ಗದರ್ಶಕ, ಚಾನಲ್, ಹೀಲರ್, ತಾರಾ ಸಂದೇಶವಾಹಕ, ಪ್ರಳಯ ಚೈತನ್ಯಗಳ ವಿತರಕ, ದಿವ್ಯ ಪರಿಷತ್ತಿನ ಸದಸ್ಯ ಮುಂತಾದ ಹಲವಾರು ಪಾತ್ರಗಳಲ್ಲಿ ಕೆಲಸ ಮಾಡುವಂತಹ ಮಟ್ಟಕ್ಕೆ ನನ್ನನ್ನು ಅಭಿವೃದ್ಧಿಪಡಿಸಿಕೊಂಡೆ. ಋಷಿಗಳು ತಮ್ಮ ಅನುಗ್ರಹ ಮತ್ತು ಪ್ರೀತಿಯಿಂದ ನನಗೆ ಉನ್ನತ ಲೋಕಗಳಲ್ಲಿ ಇನ್ನೂ ಅನೇಕ ವಿಧಗಳಲ್ಲಿ ಕೆಲಸ ಮಾಡಲು ತರಬೇತಿ ಕೊಟ್ಟರು, ಆದರೆ ಅದನ್ನಿಲ್ಲಿ ಹೇಳಲು ನನಗೆ ಅನುಮತಿಯಿಲ್ಲ. ಹಿಂತಿರುಗಿ ನೋಡಿದಾಗ ನನ್ನ ಋಷಿಗಳ ಬಗ್ಗೆ ನನಗೆ ಸಂತೋಷ ಮತ್ತು ಕೃತಜ್ಞತಾಭಾವ ಉಂಟಾಗುತ್ತದೆ.

ಏಳು ವರ್ಷಗಳ ಹಿಂದೆ ಧ್ಯಾನದ ತರಗತಿಯನ್ನು ಆರಂಭಿಸುವಾಗಲೇ ಒಂದು ಸಮುದಾಯವನ್ನು, ಅಥವಾ ಗುರುಕುಲವನ್ನು ಅಥವಾ ಆಶ್ರಮವನ್ನು ಸ್ಥಾಪಿಸುವ ಯೋಚನೆಯಿತ್ತು. ಈ ಯೋಚನೆಯಂತೆ ನಾನು ಕೆಲಕಾಲ ಕೆಲಸ ಮಾಡಿದೆ. ಆದರೆ ಅರ್ಹ ಸಹ ಕಾರ್ಯಕರ್ತರ ಕೊರತೆ ನನ್ನ ಉತ್ಸಾಹಕ್ಕೆ ತಣ್ಣೀರೆರಚಿದಂತಾಯಿತು. ಈಗ ನೋಡಿದರೆ ಒಳ್ಳೆಯದೇ ಆಯಿತೆಂದೆನಿಸುತ್ತದೆ. ಅಂತಹ ಸಂಸ್ಥೆಗಳು ಹಲವಾರು. ಅವುಗಳ ಪ್ರಾಪಂಚಿಕ ಸಂಪನ್ಮೂಲಗಳು ಹೆಚ್ಚಿದ್ದರೂ ಅದೇಕೋ ಆಧ್ಯಾತ್ಮಿಕ ತುಡಿತ ಎಲ್ಲೋ ಕಳೆದುಹೋದಂತೆನಿಸುತ್ತದೆ. ಅಂತಹ ಪ್ರಯೋಗವನ್ನು ಪುನರಾವರ್ತಿಸಲು ನನಗೆ ಇಷ್ಟವಿಲ್ಲ.

ಭೌತಿಕ ಮಟ್ಟದಲ್ಲಿ ಕೆಲಸ ಮಾಡುತ್ತ ಜನರಲ್ಲಿ ಅರಿವು ಮೂಡಿಸಿ ಅವರನ್ನು ಭಗವಂತನೊಂದಿಗೆ ಶ್ರುತಿಗೊಳಿಸುವುದೇ ಪ್ರತಿಯೊಬ್ಬ ಜ್ಯೋತಿಕಾರ್ಯಕರ್ತನ ಅತಿ ಮುಖ್ಯ ಧ್ಯೇಯವೆಂದು ನನಗೆ ಅರ್ಥವಾಗಿದೆ. ವ್ಯಕ್ತಿಗತ ಬೆಳಕಿನಿಂದ ಪ್ರೀತಿ ಮತ್ತು ಶಾಂತಿ ಹರಡುತ್ತದೆ. ಹಿಂದೆಂದೂ ವ್ಯಕ್ತಿಯೊಬ್ಬನ ಪಾತ್ರವು ಇಷ್ಟೊಂದು ಮುಖ್ಯವೂ ಅವಶ್ಯವೂ ಆಗಿರಲಿಲ್ಲ. ನವಯುಗದ ವಿದ್ಯಮಾನಗಳನ್ನು ಮೌನವಾಗಿ ಸ್ಥಾಪನೆ ಮಾಡುತ್ತಿರುವವರು ಪ್ರತ್ಯೇಕ ವ್ಯಕ್ತಿಗಳು ಹಾಗೂ ಸಣ್ಣ ತಂಡಗಳು.

ನಮ್ಮ ಧ್ಯಾನಿಗಳು ತಮ್ಮ ಪಾತ್ರಗಳನ್ನು ಅರ್ಥಮಾಡಿಕೊಂಡು, ನಾವು ಅವರಿಗೆಂದೇ ಮೀಸಲಾಗಿಟ್ಟಿರುವ ಜ್ಞಾನ ಮತ್ತು ಚೈತನ್ಯಗಳನ್ನು ಪಡೆದು, ಹೊಸಯುಗವನ್ನು ಮೊದಲು ತಮ್ಮಲ್ಲಿ ಸ್ಥಾಪಿಸಿಕೊಂಡು ನಂತರ ಎಲ್ಲೆಡೆ ಹರಡಬೇಕೆಂಬುದು ನನ್ನಾಸೆ. ನಾನು ಆಶಿಸುತ್ತೇನೆ ಹಾಗೂ ಖಂಡಿತವಾಗಿ ಕಾಯುತ್ತೇನೆ! ■


ಮಾನಸ ಫೌಂಡೇಶನ್ (ರಿ)

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.

✆ 99000 75280 (ಬೆಳಗ್ಗೆ 10ರಿಂದ ಸಂಜೆ 5)

ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಮಹರ್ಷಿ ಅಮರರವರು ಮತ್ತು ಗುರೂಜಿ ಕೃಷ್ಣಾನಂದರವರು – ಸಪ್ತರ್ಷಿ ಧ್ಯಾನ ಕೇಂದ್ರದ ಮೂಲ ಸ್ಥಾಪಕರು

## ಸುದ್ಧಿ-ಸೂಚನೆ

- 20-5-2018 ರಂದು ತಪೋನಗರದಲ್ಲಿ ಗುರೂಜಿಯವರ 79ನೇ ಹುಟ್ಟುಹಬ್ಬದ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು. ಇದರಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 19-5-2018 ರೊಳಗೆ ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬಹುದು.
- ಆನೇಕಲ್‌ನಲ್ಲಿರುವ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದ 10ನೇ ವಾರ್ಷಿಕೋತ್ಸವವನ್ನು 16-4-2018 ರಂದು ಆಚರಿಸಲಾಯಿತು.
- ದಿನಾಂಕ 02-05-2018, ಬುಧವಾರದಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ತಪೋನಗರದಲ್ಲಿ ಓರಿಯಂಟೇಶನ್ ತರಗತಿಯನ್ನು ಆಯೋಜಿಸಲಾಗಿದೆ. ವೆಬ್‌ಕಾಸ್ಟ್ ವ್ಯವಸ್ಥೆಯನ್ನು ಹೊಂದಿರುವ ದೂರಕಲಿಕೆಯ ಸಾಧಕರು ಕೂಡಾ ನೇರಪ್ರಸಾರದ ಮೂಲಕ ಇದರಲ್ಲಿ ಭಾಗವಹಿಸಬಹುದು. ಆಸಕ್ತರು ದಿನಾಂಕ 30-04-2018ರ ಒಳಗೆ ಮಾನಸ ಆಫೀಸನ್ನು ಸಂಪರ್ಕಿಸಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ.

### ಗುರೂಜಿಯವರ ಹುಟ್ಟುಹಬ್ಬದ ವಾರ್ಷಿಕೋತ್ಸವ ಕಾರ್ಯಕ್ರಮ

**ಭಾನುವಾರ, 20-05-2018**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 08 | ಮಂಗಳ | ಕೃಷ್ಣ ಅಷ್ಟಮಿ |
| 14 | ಸೋಮ | ಮಾಸ ಶಿವರಾತ್ರಿ |
| 15 | ಮಂಗಳ | ಅಮಾವಾಸ್ಯೆ |
| 18 | ಶುಕ್ರ | ಗುರೂಜಿಯವರ ಹುಟ್ಟುಹಬ್ಬ |
| 20 | ಭಾನು | ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮ |
| 22 | ಮಂಗಳ | ಶುಕ್ಲ ಅಷ್ಟಮಿ |
| 24 | ಗುರು | ಶುಕ್ಲ ದಶಮಿ |
| 29 | ಮಂಗಳ | ಪೂರ್ಣಿಮಾ |

### ಆನೇಕಲ್‌ನಲ್ಲಿ ಕಾರ್ಯಕ್ರಮ

18-5-2018ರಂದು ಬೆಳಿಗ್ಗೆ 11.30 ಘಂಟೆಗೆ ಆನೇಕಲ್‌ನ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಹುಟ್ಟುಹಬ್ಬದ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 13-5-2018 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 20-5-2018 | ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮ<br>ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ವಿಶ್ವ ಬೆಳಕು ಸಂಚಲನ ದಿನದಿಂದು ತುಮಕೂರಿನ ಚೇತನ ವಿದ್ಯಾ ಮಂದಿರ ಹೈ ಸ್ಕೂಲ್‌ನಲ್ಲಿ ಲೈಟ್ ಚಾನಲಿಂಗ್ ಸೆಷನ್ ಆದನಂತರ, ಆ ಶಾಲೆಯ ಶಿಕ್ಷಕಿ ಶ್ರೀಮತಿ ಸುಮಂಗಳ ಅವರು ತಮ್ಮ ಕಣ್ಣುಗಳಲ್ಲಿ ನೀರು ತುಂಬಿಕೊಂಡು ನನಗೆ ಹೇಳಿದರು, "ಈಗ ತಾನೇ ನಡೆದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ನಾನು ಭಾಗಿಯಾಗಿದ್ದೆ. ನನ್ನಲ್ಲಿ ಏನೋ ಪವಾಡ ಸಂಭವಿಸಿದೆ ಅಂತ ಅನಿಸುತ್ತಿದೆ. ಆದುದರಿಂದ ಲೈಟ್ ಚಾನಲಿಂಗ್ ಅಭ್ಯಾಸವನ್ನು ನಿರಂತರವಾಗಿ ಮಾಡುತ್ತೇನೆ." ಅವರು ಮುಂದುವರೆಸಿ ಹೇಳಿದರು, "ಸುಮಾರು ಆರು ತಿಂಗಳುಗಳ ಹಿಂದೆ, ಬಸ್ಸಿನಿಂದ ಕೆಳಗೆ ಬಿದ್ದು ಮಂಡಿ ಭಾಗದಲ್ಲಿ ಗಾಯವಾಗಿತ್ತು. ಬಹಳ ನೋವನ್ನು ಅನುಭವಿಸುತ್ತಿದ್ದೆ. ಔಷಧಿ ತೆಗೆದುಕೊಂಡ ನಂತರ ನಾನು ಚೇತರಿಸಿಕೊಂಡೆ, ಆದರೆ ನೋವು ಸಂಪೂರ್ಣವಾಗಿ ಮಾಯವಾಗಿರಲಿಲ್ಲ, ನನಗೆ ನೇರವಾಗಿ ನಡೆಯಲೂ ಸಾಧ್ಯವಾಗುತ್ತಿರಲಿಲ್ಲ. ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಬೆಳಕು ಹೀಲ್ ಮಾಡುತ್ತದೆಂದು ಹೇಳಿದಾಗ, ನಾನು ಬೆಳಕು ನೋವು ಇರುವಂಥ ಜಾಗಕ್ಕೆ ಹರಿದು ಬಂದು ಹೀಲ್ ಮಾಡುತ್ತಿರುವುದರ ಮೂಲಕ ನನಗೆ ಸಹಾಯ ಮಾಡುತ್ತಿದೆಯೆಂದು ಊಹಿಸಿಕೊಳ್ಳುತ್ತಿದ್ದೆ. ಕಳೆದ ಆರು ತಿಂಗಳುಗಳಲ್ಲಿ ಮೊದಲ ಬಾರಿ ನಾನು ನೇರವಾಗಿ ನಡೆದೆ, ಸೆಷನ್ ನಿಂದ ನೇರವಾಗಿ ನಿಮ್ಮ ಬಳಿಗೆ ಬರುತ್ತಿದ್ದೇನೆ!" ಇದನ್ನು ಕೇಳಿದ ನಾನು ಮೂಕವಿಸ್ಮಿತನಾದೆ. ನಾನು ಬೆಳಕಿಗೆ ಕೃತಜ್ಞತೆಯನ್ನು ಸಲ್ಲಿಸಿ ಮುಂದಿನ ಶಾಲೆಯ ಲೈಟ್ ಚಾನಲಿಂಗ್ ಸೆಷನ್‌ಗಾಗಿ ಹೋದೆ.

ಬೇರೊಂದು ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸಿಕೊಡುವುದರ ಬಗ್ಗೆ ಗೊಂದಲ ಇತ್ತು. ಅಂಜಲಿ ಮೇಡಮ್ ಅವರು ಲೈಟ್ ಚಾನಲಿಂಗ್ ಪ್ರಾಮುಖ್ಯತೆಯ ಬಗ್ಗೆ, ಅದರ ಪ್ರಯೋಜನಗಳ ಬಗ್ಗೆ ಶಾಲೆಯವರಿಗೆ ತಿಳಿಸಿ ಹೇಳುತ್ತಿದ್ದರು. ಇಲ್ಲಿ ನನ್ನದೇನು ಪಾತ್ರವಿಲ್ಲವೆಂದು ಅರಿತುಕೊಂಡು, ನಾನು ಸುಮ್ಮನೆ ಕುಳಿತು ಲೈಟ್ ಚಾನಲಿಂಗ್ ಮಾಡಲಾರಂಭಿಸಿದೆ. ನಾನು ಲೈಟ್ ಚಾನಲಿಂಗ್ ಮುಗಿಸುತ್ತಿದ್ದಂತೆಯೇ ವ್ಯಕ್ತಿಯೊಬ್ಬರು ಬಂದು, ತಮಗೆ ಆಡಳಿತ ಮಂಡಳಿಯ ಯಾವ ಸದಸ್ಯರನ್ನೂ ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲವೆಂದೂ ಮತ್ತು ಲೈಟ್ ಚಾನಲಿಂಗ್ ಸೆಷನ್ ನಡೆಸುವುದಕ್ಕೆ ಅವಕಾಶ ಕೊಡಲು ತಮಗೂ ಆಗುವುದಿಲ್ಲ ಎಂದು ಹೇಳಿದರು. ಆ ಸಮಯದಲ್ಲಿಯೇ ದೂರವಾಣಿ (ಫೋನ್) ಕರೆ ಬಂತು. ಆಡಳಿತ ಮಂಡಳಿಯ ವ್ಯಕ್ತಿಯೊಬ್ಬರು ಲೈಟ್ ಚಾನಲಿಂಗ್ ಸೆಷನ್ ನಡೆಸಲು ಅನುಮತಿ ನೀಡಿದರು. ಕ್ಷಣಾರ್ಧದಲ್ಲಿ ಇಡೀ ವಾತಾವರಣ ಬದಲಾಯಿತು. ಲೈಟ್ ಚಾನಲಿಂಗ್ ಸೆಷನ್ ನಡೆಸಿದೆವು, ಎಲ್ಲ ಮಕ್ಕಳು ಬಹಳ ಚೆನ್ನಾಗಿ ಭಾಗವಹಿಸಿದರು.

– ಗುರುರಾಜ್ ಕಾನಡೆ, ವಾಲೆಂಟಿಯರ್

ಬೆಳಕಿನ ವಿಶ್ವ ಸಂಚಲನ ದಿನದಂದು, ಸೇಂಟ್ ಜೋಸೆಫ್ ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸಿಕೊಡುವಾಗ, "ಈಗ ಇಡೀ ಶಾಲೆಯ ಆವರಣಕ್ಕೆ ಬೆಳಕು ಹರಡುತ್ತಿದೆಯೆಂದು ಭಾವಿಸಿಕೊಳ್ಳಿ," ಎಂದು ಹೇಳುತ್ತಿದ್ದಂತೆಯೆ, ನನ್ನೊಳಗೆ ಮತ್ತು ನನ್ನ ಸುತ್ತಲೂ ಬೆಳಕು ಪ್ರವಾಹ ರೀತಿಯಲ್ಲಿ ಹರಿದು ಬಂದಂತೆ ಅನಿಸಿತು. ಇಡೀ ಶಾಲೆಯ ಆವರಣ ಬೆಳಕಿನ ಪ್ರವಾಹದಲ್ಲಿ ಮುಳುಗಿತ್ತು, ಲೈಟ್ ಚಾನಲಿಂಗ್ ಟೆಕ್ನಿಕ್ ಅಭ್ಯಾಸ ಮಾಡಿದಾಗ ಬೆಳಕು ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆ ಮತ್ತು ಬೆಳಕು ಹೇಗೆ ಎಲ್ಲ ಕಡೆ ತುಂಬಿಕೊಳ್ಳುತ್ತದೆ ಎಂಬುದರ ನೇರ ಅನುಭವವಾಯಿತು.

– ಶ್ರುತಿ ಸುಧಾಕರ್, ವಾಲೆಂಟಿಯರ್

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ಪಾಂಡುರಂಗ**

ಮೂಲ ಸ್ಥಾಪಕರಾದ ಲೈಟ್ ಮಾಸ್ಟರ್‌ಗಳ ವಿಷನ್‌ಅನ್ನು ಅಭಿವ್ಯಕ್ತಿಸುವುದಕ್ಕಾಗಿ ಮಾನಸ ಫೌಂಡೇಶನ್ ಎಂಬ ಆಧ್ಯಾತ್ಮಿಕ ಮಿಷನ್ ಒಂದನ್ನು ಮೂವತ್ತು ವರ್ಷಗಳ ಹಿಂದೆ ಪ್ರಾರಂಭಿಸಲಾಯಿತು. ಸಪ್ತ ಋಷಿಗಳ ಮಾರ್ಗ ಸ್ಥಾಪಿಸುವುದಕ್ಕಾಗಿ ಗುರೂಜಿ ಕೃಷ್ಣಾನಂದರವರು, ತಮಗೆ ಪ್ರಿಯವಾದವುಗಳನ್ನು ತ್ಯಾಗ ಮಾಡಿದರು. ಅವರು ಅಪಾರ ವೈಯಕ್ತಿಕ ಆಘಾತಗಳನ್ನೆಲ್ಲ ಸಹಿಸಿಕೊಳ್ಳಬೇಕಾಯಿತು. ಇದರಿಂದ ಮಿಷನ್ ಉದಯಿಸಿ, ಪ್ರಾಮಾಣಿಕ ಅನ್ವೇಷಕರಿಗೆ ಆಧ್ಯಾತ್ಮಿಕ ಮಾರ್ಗದರ್ಶನ ದೊರೆಯಲು ಸಾಧ್ಯವಾಯಿತು. ಸಂಸ್ಥೆಯ ಉಸ್ತುವಾರಿ ವಹಿಸಿಕೊಂಡಿರುವವರ ಪ್ರಾಮಾಣಿಕ ಪ್ರಯತ್ನಗಳಿಂದಾಗಿ, ಗುರೂಜಿಯವರು ಸ್ಥಾಪಿಸಿದ ಮಾರ್ಗದ ಆಧ್ಯಾತ್ಮಿಕ ಭಂಡಾರವು ಸುಂದರವಾಗಿ ಉಳಿದಿದೆ.

ಈಗ ತಪೋನಗರದ ಸುತ್ತಲೂ ಕಾಂಕ್ರೀಟ್ ಕಾಡು ಹೆಚ್ಚುತ್ತಿದೆ. ತಪೋನಗರದ ಸುತ್ತ ಮುತ್ತಲೂ ಹೆಚ್ಚುತ್ತಿರುವ ಅನುಕೂಲತೆಗಳಿಂದಾಗಿ ಶಬ್ದಮಾಲಿನ್ಯ, ವಾಯುಮಾಲಿನ್ಯ ಮತ್ತು ಜನಜಂಗುಳಿ ಹೆಚ್ಚಾಗಿದೆ. ಜೊತೆಜೊತೆಯಲ್ಲೇ ಚೈತನ್ಯ ವಲಯಗಳ ಕಂಪನಗಳೂ ವೃದ್ಧಿಸಿವೆ. ನಿಯತಕಾಲಿಕವಾಗಿ ಲೈಟ್ ಮಾಸ್ಟರ್‌ಗಳು, ಈ ಪವಿತ್ರ ಸ್ಥಳಕ್ಕೆ ಹೊಸದಾದ ಮತ್ತು ಪ್ರಬಲವಾದ ಆಧ್ಯಾತ್ಮಿಕ ಚೈತನ್ಯಗಳನ್ನು ಹರಿಸುತ್ತಿದ್ದಾರೆ. ಜನಸಂದಣಿ ಇರದ ಈ ಧ್ಯಾನ ಮಾರ್ಗ, ಜನರಿದ್ದರೆ ಯಶಸ್ಸು ಎಂದು ಭಾವಿಸುವ ಜನರಿಗೆ, ಹೊಳಪು ಕಳೆದುಕೊಂಡಂತೆ ಕಾಣಿಸುತ್ತದೆ. ಆದರೆ ಆಳವಾಗಿ ಅರಿತವರಿಗೆ, ಹೊಳಪು ಮಾಸಿದರೂ ಮೌನದ ಗಾಂಭೀರ್ಯಯುತ ಸರಳತೆಯು ಉಳಿದುಕೊಂಡಿರುತ್ತದೆ ಎಂದು ತಿಳಿದಿದೆ.

ಮಾರ್ಗದ ವ್ಯವಸ್ಥೆ, ಶಿಸ್ತು ಬದ್ಧತೆಯನ್ನು ಕಾಪಾಡಿಕೊಂಡು ಬಂದಿದ್ದರೂ, ನಿವಾಸಿಗಳ ಮೇಲಾಗಲೀ ಅಥವಾ ಧ್ಯಾನಿಗಳ ಮೇಲಾಗಲಿ ನಿಯಮಗಳನ್ನು ಪಾಲಿಸಲೇಬೇಕೆಂದು ಒತ್ತಡ ಹೇರುವುದಿಲ್ಲ. ಇಲ್ಲಿ ಯಾವಾಗಲೂ ಇಚ್ಛಾ ಸ್ವಾತಂತ್ರ್ಯವನ್ನು ಗೌರವದಿಂದ ಕಾಣಲಾಗುತ್ತದೆ. ಋಷಿಗಳ ನೇರ ಮಾರ್ಗ ದರ್ಶನದಲ್ಲಿ ಯಾವ ಮಂತ್ರ ಅಥವ ಆಚರಣೆಗಳಿಲ್ಲದೇ ನೇರವಾಗಿ ಚೈತನ್ಯಗಳನ್ನು ಬಳಸುವ ಹೊಸ ಯುಗದ ವಿಧಾನಗಳು ಕೆಲವರಿಗೆ ವಿಚಿತ್ರವಾಗಿ ತೋರಬಹುದು. ಆದರೆ ಕಾಲ ಕ್ರಮೇಣ ಇಂಥ ಹೊಸ ವಿಚಾರಗಳು ಪ್ರತಿಯೊಬ್ಬರಿಗೂ ಸ್ವೀಕಾರಾರ್ಹವಾಗುತ್ತವೆ. ಪ್ರೀತಿಯ ಲೈಟ್ ಮಾಸ್ಟರ್, ಗುರೂಜಿ ಕೃಷ್ಣಾನಂದ ಅವರ ಜನ್ಮ ದಿನದ ವಾರ್ಷಿಕೋತ್ಸವ ಸಂದರ್ಭದಲ್ಲಿ, ಆತ್ಮಾವಲೋಕನ ಮಾಡಿಕೊಂಡು ಅವರ ಯೋಜನೆಗಳಿಗೆ ನಮ್ಮ ಬದ್ಧತೆಯನ್ನು ಮತ್ತೊಮ್ಮೆ ನವೀಕರಿಸಿಕೊಳ್ಳುತ್ತೇವೆ. ಈಗ ಇದೇ ನಮ್ಮ ಜೀವನದ ಉದ್ದೇಶವಾಗಿದೆ. ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

## ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಸೆಪ್ಟೆಂಬರ್ 2005 (ಮುಂದುವರೆದ ಭಾಗ)

ಸಾವಿನ ನಂತರ ಬದುಕು ಇದೆ ಮತ್ತು ಅದರ ನಂತರವೂ ಬದುಕು ಇದೆ ಎಂದು ನಮ್ಮೆಲ್ಲರಿಗೂ ತಿಳಿದಿದೆ. ಆ ರೀತಿ ಅನೇಕ ಬದುಕುಗಳು ಇವೆ, ಏಕೆಂದರೆ ಅಸ್ತಿತ್ವದಲ್ಲಿ ಅನೇಕ ಪದರಗಳಿವೆ. ಇವೆಲ್ಲವೂ ತಾತ್ಕಾಲಿಕ. ಇಲ್ಲಿನ ಬದುಕು ತಾತ್ಕಾಲಿಕವೇಕೆಂದರೆ, ಯಾವುದಾದರೊಂದು ದಿನ ನಾವು ಇಲ್ಲಿಂದ ತೆರಳಬೇಕು ಮತ್ತು ಮುಂದಿನ ಬದುಕಿಗೆ ಪ್ರವೇಶಿಸಬೇಕು. ಆ ಬದುಕು ಕೂಡ ಶಾಶ್ವತವಲ್ಲ ಅದರ ನಂತರ ಪುನಃ ನಾವು ಇನ್ನೂ ಮುಂದಿನ ಬದುಕನ್ನು ಪ್ರವೇಶಿಸಬೇಕು. ಈ ಪದರದ ನಂತರದ ಅಸ್ತಿತ್ವದ ಪದರಗಳು ಎಷ್ಟೇ ಇದ್ದರೂ ಅವೆಲ್ಲವೂ ತಾತ್ಕಾಲಿಕವೇ. ಆದರೆ ಅಸ್ತಿತ್ವದ ಒಂದು ಶಾಶ್ವತ ಪದರವಿದೆ, ಅಲ್ಲಿ ನಾವು ದೇವರೊಂದಿಗೇ ಇರುತ್ತೇವೆ. ಆದ್ದರಿಂದ ಈ ಭೂಮಿಯ ಮೇಲೆ ನಾವು ಬದುಕಿರುವಾಗ, ದೇವರೊಂದಿಗಿನ ಆ ಬದುಕಿಗೆ ಸಿದ್ಧರಾಗಬೇಕು. ನಾವು ಸಿದ್ಧರಾಗುವುದು ಹೇಗೆ? ನಮ್ಮನ್ನು ಶುದ್ಧಗೊಳಿಸಿಕೊಳ್ಳುವ ಮೂಲಕ, ಪ್ರಜ್ಞಾಪೂರ್ವಕವಾಗಿ ಎಲ್ಲ ನಕಾರಾತ್ಮಕತೆಗಳನ್ನು ತೆಗೆದುಹಾಕಿ ಈ ಶಾರೀರಿಕ ವ್ಯವಸ್ಥೆಯನ್ನು ಶುದ್ಧಗೊಳಿಸುವ ಮೂಲಕ, ಭಾವನಾತ್ಮಕವಾಗಿ, ಭೌದ್ಧಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ವಿಸ್ತಾರಗೊಳ್ಳುವ ಮೂಲಕ.

ನಾವು ಹೊಸ ಯುಗದೊಳಕ್ಕೆ ಮುನ್ನಡೆಯುತ್ತಿದ್ದೇವೆ. ಇದನ್ನು ನಾವೆಷ್ಟು ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತೇವೆ. ಈ ಸರಳ ಸತ್ಯವನ್ನು ಹಿಂದಿನ ತಲೆಮಾರಿಗೆ ಸೇರಿದ ವಯೋವೃದ್ಧರಿಗೆ ಹೇಳಿದರೆ, ಅದನ್ನು ಗ್ರಹಿಸುವುದು ಅವರಿಗೆ ಬಹಳ ಕಷ್ಟ. ಮುಂದಿನ ತಲೆಮಾರಿನವರನ್ನು ನೀವು ಗಮನಿಸುತ್ತಿರಬಹುದು. ಅವರು ಅದ್ಭುತ ವ್ಯಕ್ತಿಗಳು, ಪ್ರತಿಭಾವಂತರು, ಅವರಿಗೆ ಪ್ರಾರಂಭದಿಂದಲೇ ಇದು ತಿಳಿದಿತ್ತೇನೋ ಅನ್ನುವಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ವಿಷಯವೇನೆಂದರೆ, ನಾವು ಹೊಸ ಯುಗದೊಳಕ್ಕೆ ಮುನ್ನಡೆಯುತ್ತಿರುವುದರಿಂದಾಗಿ, ನಮಗೆ ಪರಿಪೂರ್ಣ ಬದುಕನ್ನು ನಡೆಸಲು ಸಾಧ್ಯ ಮತ್ತು ಮುಂದಿನ ಬದುಕಿಗಾಗಿ ನಾವು ಈಗ ಬಾಳಬಹುದು ಎನ್ನುವುದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಮತ್ತು ಒಪ್ಪಿಕೊಳ್ಳಲು ಸಾಧ್ಯ. ಸನ್ಯಾಸಿಯಾಗುವುದಕ್ಕೆ ಅಥವ ಆಧ್ಯಾತ್ಮಿಕ ವ್ಯಕ್ತಿಯಾಗುವುದಕ್ಕೆ ಸಂಸಾರವನ್ನು ತ್ಯಜಿಸಿ ಓಡಿಹೋಗಬೇಕೆಂದು ನಾವು ಇಲ್ಲಿಯವರೆಗೂ ತಿಳಿದಿದ್ದೆವು. ಜನರು ಸಂಸಾರದಿಂದ ಓಡಿ ಹೋಗುತ್ತಿದ್ದರು ಕೂಡ! ಇದಾವುದೂ ಬೇಕಾಗಿಲ್ಲವೆಂದು ನಮಗೀಗ ತಿಳಿದಿದೆ. ಬಾಳಿನ ಬಹು ಮುಖ್ಯವಾದ ಭಾಗವೆಂದರೆ ಆಧ್ಯಾತ್ಮಿಕ ಭಾಗವೆಂದು ನಮಗೆ ಉದ್ದೇಶಪೂರ್ವಕವಾಗಿ ಆ ಕಾಲದಲ್ಲಿ ಹೇಳಿಕೊಡಲಾಗಿತ್ತು. ಈಗ ಕೂಡ ಅದು ಮುಖ್ಯವೇ, ಇಲ್ಲವೆಂದವರಾರು? ಲೌಕಿಕ ಬದುಕು ಕೂಡ ಮುಖ್ಯವೆಂದು ಋಷಿಗಳು ಮತ್ತು ಅಮರರವರು ನಮಗೆ ಕಲಿಸಿಕೊಟ್ಟರು. ಇಲ್ಲಿನ ಬದುಕನ್ನು ಅನುಭವಿಸುವುದಕ್ಕಾಗಿಯೇ ನಾವಿಲ್ಲಿಗೆ ಬಂದಿದ್ದೇವೆ. ಇದನ್ನು ಅನುಭವಿಸದಿದ್ದರೆ ನಾವು ಸೋತಂತೆ. ಇಲ್ಲಿನ ಬದುಕನ್ನು ಪೂರ್ತಿಯಾಗಿ ಅನುಭವಿಸುವುದೇ ಆಧ್ಯಾತ್ಮಿಕ. ಆದರೆ ಸಾಮಾನ್ಯವಾಗಿ ಬದುಕಿನ ಅಮುಖ್ಯ ವಿಷಯಗಳಲ್ಲಿ ನಾವು ಕಳೆದುಹೋಗುತ್ತೇವೆ. ಇಲ್ಲಿನ ಬದುಕಿನಲ್ಲಿ ಎರಡು ಅಂಶಗಳಿವೆ ಅಂದುಕೊಳ್ಳೋಣ – ಒಂದು ಮುಖ್ಯವಾದ ಅಂಶ ಮತ್ತೊಂದು ಅತಿಮುಖ್ಯವಾದ ಅಂಶ. ಆಹಾರ ಮುಖ್ಯ, ಅಲಂಕರಿಸಿಕೊಳ್ಳುವುದೂ ಮುಖ್ಯ, ಹಾಗೆಯೇ ದಿನ ನಿತ್ಯದ ಬದುಕಿನ ಎಲ್ಲವೂ ಮುಖ್ಯವೇ. ಇವೆಲ್ಲವು ಅಮುಖ್ಯವೆಂದು ನಾವೆಂದಿಗೂ ತಿಳಿಯಬಾರದೆನ್ನುವುದಕ್ಕಾಗಿ ಇಷ್ಟೆಲ್ಲವನ್ನೂ ಹೇಳುತ್ತಿದ್ದೇನೆ. ಸೃಷ್ಟಿಯ ವೈವಿಧ್ಯತೆಯನ್ನು, ಪ್ರಕೃತಿಯ ವೈವಿಧ್ಯತೆಯನ್ನು ಅನುಭವಿಸುವುದಕ್ಕಾಗಿ ನಾವಿಲ್ಲಿಗೆ ಬಂದಿದ್ದೇವೆ. ಪ್ರಕೃತಿಯನ್ನು ಅನುಭವಿಸುವುದು ಅತಿ ಮುಖ್ಯ. ಸಂಗೀತವನ್ನು ಆಲಿಸುವುದಷ್ಟೇ ಅಲ್ಲ ಅದನ್ನು ಅನುಭವಿಸುವುದು ಮುಖ್ಯ. ಕವಿತೆಯನ್ನು ಮತ್ತು ಬದುಕಿನಲ್ಲಿ ಸುಂದರವಾದುದೆಲ್ಲವನ್ನೂ ನಾವು ಅನುಭವಿಸಬೇಕು. ಇವೆಲ್ಲವನ್ನೂ ಕಡೆಗಣಿಸಿ ದಿನನಿತ್ಯದ ಚಟುವಟಿಕೆಗಳಿಗೆ ಮಹತ್ವ ಕೊಟ್ಟರೆ ಬಹಳಷ್ಟನ್ನು ಕಳೆದುಕೊಳ್ಳುತ್ತೇವೆ. ಇದು ಬಹಳ ಮುಖ್ಯ. ಹಾಗೆ ಮಾಡಿದಾಗ ಮಾತ್ರವೇ ನಾವು ಉನ್ನತ ಬದುಕನ್ನು ಬಾಳುತ್ತೇವೆ. ಅದು ಸಾಧ್ಯ, ಮಹಾನ್ ಮಾಸ್ಟರ್‌ಗಳು ಈ ರೀತಿ ಬಾಳಿದ್ದಾರೆ. ನಾನು ಅಮರರವರನ್ನು ಕಂಡಿದ್ದೇನೆ, ಅವರಿಗೆ ಯಾವುದೂ ಅಮುಖ್ಯವಾಗಿರಲಿಲ್ಲ. ಅವರು ಮಕ್ಕಳೊಂದಿಗೆ ಆಟವಾಡುತ್ತಿದ್ದರು; ಅವರು ಅದರಲ್ಲಿಯೇ ತಲ್ಲೀನರಾಗುತ್ತಿದ್ದರು. ಅವರು ಎಷ್ಟೊಂದು ತಲ್ಲೀನರಾಗುತ್ತಿದ್ದರೆಂದರೆ ಅವರ ಮಟ್ಟಕ್ಕೆ ಇಳಿದು ಅವರೂ ಮಕ್ಕಳಾಗಿಬಿಡುತ್ತಿದ್ದರು, ಹಾಗೂ ದೇವರೊಂದಿಗೆ ಮಾತನಾಡುವುದೂ ಅವರಿಗೆ ಇದರಷ್ಟೇ ಸುಲಭವಾಗಿತ್ತು! ಅಂತಹ ಮಾಸ್ಟರ್‌ಗಳು ನಿಮಗೆ ಸಿಗುವುದಿಲ್ಲ. ನೀವೆಲ್ಲರೂ ಅವರನ್ನು ಭೇಟಿಯಾಗಿದ್ದರೆ ಎಷ್ಟೊಂದು ಚೆನ್ನಾಗಿರುತ್ತಿತ್ತು. ಕೊನೆಯ ಪಕ್ಷ ನನ್ನ ಮೂಲಕವಾದರೂ ನಿಮಗೆ ಅವರ ಪರಿಚಯವಾಗಿದೆ. ವಿಷಯಕ್ಕೆ ಬರೋಣ – ಯಾವುದನ್ನೂ ನಿರ್ಲಕ್ಷಿಸಬೇಡಿ – ಆಹಾರ ಮುಖ್ಯ, ಧ್ಯಾನ ಮುಖ್ಯ. ಆಹಾರ ದೇಹಕ್ಕೆ ಬೇಕು, ಧ್ಯಾನ ಆತ್ಮಕ್ಕೆ ಬೇಕು – ಎಲ್ಲವೂ ಮುಖ್ಯ.

ಬೇರೆಯವರಿಗೆ ಸಹಾಯ ಮಾಡಲು ಅಥವ ಸೇವೆ ಮಾಡಲು, ನಮಗಿರುವ ಸವಲತ್ತುಗಳು ಮುಖ್ಯವಲ್ಲ. ಸೇವೆ ಮಾಡುವ ಮನೋಭಾವ ಮುಖ್ಯ, ಆಸಕ್ತಿ ಮುಖ್ಯ, ಪ್ರೀತಿಯನ್ನು ಅಭಿವ್ಯಕ್ತಿಸುವುದು ಮುಖ್ಯ. ಬೇರೆಯವರಿಗೆ ಸಹಾಯ ಮಾಡಲು ಬೇಕಾಗಿರುವುದು ಆಧ್ಯಾತ್ಮಿಕ ಐಶ್ವರ್ಯ, ಭೌತಿಕ ಐಶ್ವರ್ಯವಲ್ಲ.

ನನ್ನ ಬಗ್ಗೆ ನಾನೇ ಸ್ವಲ್ಪ ಹೊಗಳಿಕೊಳ್ಳುತ್ತೇನೆ. ನಾನು ಅಂತರವಾಣಸದಲ್ಲಿದ್ದಾಗ ನನ್ನಲ್ಲಿ ಹಣವಿಲ್ಲವೆಂದು ಎಂದಿಗೂ ಅನ್ನಿಸಲಿಲ್ಲ. ನನ್ನ ಜೇಬಿನಲ್ಲಿ ಒಂದು ಪೈಸೆ ಇಲ್ಲದಿದ್ದರೂ ಕೂಡ ರಾಜನಂತೆ ಬದುಕುತ್ತಿದ್ದೆ. ಟೊಮ್ಯಾಟೋ ಹಣ್ಣುಗಳನ್ನೇ ತಿಂದು ಒಂದು ವಾರಕಾಲ ಬದುಕಿದ್ದೆ ಎಂದು ಹಿಂದೊಮ್ಮೆ ನಿಮಗೆ ಹೇಳಿದ್ದೆ – ಬೆಳಗಿನ ತಿಂಡಿ ಟೊಮ್ಯಾಟೋ, ಮಧ್ಯಾಹ್ನ ಊಟ ಟೊಮ್ಯಾಟೋ ಮತ್ತು ರಾತ್ರಿಯ ಊಟ ಟೊಮ್ಯಾಟೊ! ಆಗ ಕೂಡ ನಾನೊಬ್ಬ ರಾಜನೇನೋ ಎನ್ನುವಂತೆ ಭಾಸವಾಗುತಿತ್ತು. ಒಮ್ಮೆ ನನ್ನಲ್ಲಿ ಒಂದು ರೂಪಾಯಿಯಿತ್ತು. ಆಗ ನನ್ನ ಬಳಿಗೆ ಬಹಳ ಕಷ್ಟದಲ್ಲಿದ್ದ ಒಬ್ಬ ವ್ಯಕ್ತಿ ಬಂದ, ಅವನಿಗೆ ಸಹಾಯದ ಅವಶ್ಯಕತೆ ಇತ್ತು. ಅವನಿಗೆ ಆ ನೋಟನ್ನು ಕೊಟ್ಟೆ, ಅದನ್ನು ಕಳೆದುಕೊಂಡೆನೆಂದು ಅನ್ನಿಸಲಿಲ್ಲ. ಆಗಲೇ ಹೇಳಿದ ಹಾಗೆ ನನ್ನನ್ನೇ ನಾನು ಸ್ವಲ್ಪ ಹೊಗಳಿಕೊಳ್ಳುತ್ತಿದ್ದೇನೆ! ಆದ್ದರಿಂದ ನಿಮ್ಮಲ್ಲಿ ಎಷ್ಟು ಇದೆ ಅನ್ನುವುದಕ್ಕಿಂತ ನಿಮ್ಮೊಳಗೆ ಎಷ್ಟು ಇದೆ ಅನ್ನುವುದು ಮುಖ್ಯ.

ಇದೆಲ್ಲವೂ ನಮ್ಮ ಈ ಬದುಕನ್ನು ಅತ್ಯಂತ ತಿಳುವಳಿಕೆಯಿಂದ ಮತ್ತು ಆಧ್ಯಾತ್ಮಿಕವಾಗಿ ಬಾಳಲು ಸಹಾಯಮಾಡುತ್ತದೆ. ಇದನ್ನು ನಮ್ಮಿಂದ ನಿರೀಕ್ಷಿಸಲಾಗುತ್ತದೆ. ನಾವಿಲ್ಲಿರುವುದು ಕೆಲವು ತಂತ್ರಗಳನ್ನು ಕಲಿತು ಅಭ್ಯಾಸ ಮಾಡಿ ನಂತರ ಅದನ್ನು ಮರೆಯುವುದಕ್ಕೆ ಅಲ್ಲ ಎನ್ನುವುದನ್ನು ನೆನಪಿಡಬೇಕು. ನಾವು ಮುಂದಿನ ಋಷಿಗಳು! ಮುಂದೊಮ್ಮೆ ಜನರನ್ನು ಮಾರ್ಗದರ್ಶಿಸ ಬೇಕಾದವರು ನೀವು – ನಿಮಗೆ ಅದು ತಿಳಿದಿದೆಯೋ, ಒಪ್ಪಿಕೊಳ್ಳುತ್ತೀರೋ ಅಥವ ಇಲ್ಲವೋ. ನಿಮ್ಮ ಪಾತ್ರ ನಿರ್ಧಾರವಾಗಿದೆ. ಪ್ರಜ್ಞಾಪೂರ್ವಕವಾಗಿ ನೀವಿದನ್ನು ಮಾಡದಿರಬಹುದು. ನಾನು ಇದನ್ನು ಮಾಡುವುದಿಲ್ಲ ಎಂದು ನೀವು ಹೇಳಿದರೂ ಅಪ್ರಜ್ಞಾಪೂರ್ವಕವಾಗಿ ನೀವದನ್ನು ಮಾಡುತ್ತಿರುತ್ತೀರಿ, ಏಕೆಂದರೆ ನಿಮ್ಮಲ್ಲಿರುವ ಜ್ಞಾನ ನಿಮ್ಮನ್ನು ಸುಮ್ಮನೆ ಇರಲು ಬಿಡುವುದಿಲ್ಲ. ಬೇರೆಯವರಿಗೆ ನೀವು ಯಾವಾಗಲೂ ಮಾರ್ಗದರ್ಶನ ನೀಡುತ್ತೀರಿ. ನಾನು ಯಾವಾಗಲೂ ಹೇಳುವಂತೆ, ನಿಮ್ಮಲ್ಲಿ ಬೆಳಕು ಇದ್ದಾಗ ನಿಮ್ಮ ಹಸ್ತದಿಂದ ಅದನ್ನು ಮುಚ್ಚಿದರೂ, ಬೆರಳುಗಳ ಸಂದಿನಿಂದ ಬೆಳಕು ಹೊರಬರುತ್ತದೆ. ಅದು ನಮ್ಮ ಪಾತ್ರ, ಅದು ಬಹು ಮುಖ್ಯ. ಅದನ್ನು ಅರಿತುಕೊಳ್ಳೋಣ. ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

11–3–2018

ಇತ್ತೀಚಿನ ದಿನಗಳಲ್ಲಿ ಈ ತರಗತಿಗಳಿಗೆ ಬರುತ್ತಿರುವ ಜನರ ಸಂಖ್ಯೆ ಕಡಿಮೆಯಾಗುತ್ತಿದೆ. ಗುರೂಜಿಯವರ ಭೌತಿಕ ಉಪಸ್ಥಿತಿಯು ಅನೇಕ ಜನರನ್ನು ಇಲ್ಲಿಗೆ ಕರೆತರುತ್ತಿತ್ತು. ಅವರ ಆಕರ್ಷಣಾ ಶಕ್ತಿ ಮತ್ತು ಅವರ ಪ್ರೀತಿ ಅನೇಕ ಜನರನ್ನು ಕರೆತರುತ್ತಿತ್ತು. ಇಲ್ಲಿ ನಿಮ್ಮನ್ನು ಯಾವುದು ಹಿಡಿದಿಟ್ಟಿದೆ? ಖಂಡಿತವಾಗಿಯೂ ಅದು ಗುರೂಜಿಯವರ ಪ್ರೀತಿ. ಅವರ ಪ್ರೀತಿಯೇ ನಿಮ್ಮನ್ನು ಇಲ್ಲಿನ ಕೆಲಸದಲ್ಲಿ ತೊಡಗುವಂತೆ ಮಾಡಿದೆ. ಅವರು ಪ್ರೀತಿ ಮತ್ತು ಬದುಕಿನ ಸಾಕಾರಮೂರ್ತಿಯಾಗಿದ್ದರು. ಅವರು ಬದುಕಲು ಬೇಕಾದಂತಹ, ಆಚರಿಸಲು ಸಾಧ್ಯವಾಗುವ ಮಾರ್ಗದರ್ಶನವನ್ನು ನೀಡುತ್ತಿದ್ದರು. ಬದುಕುವುದು ಹೇಗೆಂದೂ ಅವರು ಕಲಿಸಿದರು. ಹಾಗೂ ಅತ್ಯುನ್ನತವಾದುದನ್ನು ಅನುಭವಿಸಲು ಬೇಕಾದ ಎಲ್ಲ ಮಾರ್ಗದರ್ಶನವನ್ನು ನೀಡುತ್ತಿದ್ದರು. ಸಾಧನೆಗಾಗಿ, ಇಲ್ಲಿನ ಸುಂದರ ಕಟ್ಟಡಗಳು ಮತ್ತು ಇಲ್ಲಿನ ಎಲ್ಲ ಸವಲತ್ತುಗಳನ್ನು ಸೃಷ್ಟಿಸಿದರು. ಅಮೂಲ್ಯವಾದ ಚೈತನ್ಯಗಳನ್ನು ಇಲ್ಲಿ ಸಂಗ್ರಹಿಸಿದರು. ನಾವು ಸಾವಿರಾರು ವರ್ಷಗಳವರೆಗೆ ತಪಸ್ಸು ಮಾಡಿದರೂ ಕೂಡ ಇಂತಹ ಚೈತನ್ಯಗಳನ್ನು ಬಹುಶಃ ಪಡೆಯಲಾಗುತ್ತಿರಲಿಲ್ಲವೇನೋ. ಇಲ್ಲಿ ಲಭ್ಯವಿರುವ ಈ ಚೈತನ್ಯಗಳನ್ನು ಮತ್ತು ಬಹಳ ಬೆಲೆಬಾಳುವ ಪರಿಶುದ್ಧ ಜ್ಞಾನವನ್ನು ಬಳಸಿಕೊಳ್ಳುವುದಕ್ಕೋಸ್ಕರ ಜನರು ಇಲ್ಲಿಗೆ ಬರಲಿ ಮತ್ತು ಪ್ರಯೋಜನಗಳನ್ನು ಪಡೆಯಲಿ ಎಂದು ಆಶಿಸುತ್ತೇನೆ.

ನನಗೆ ದುಃಖವಾಗುತ್ತಿದೆ ಎಂದು ಹೇಳಿದ್ದು, ಕಡಿಮೆ ಸಂಖ್ಯೆಯ ದೃಷ್ಟಿಯಿಂದ ಅಲ್ಲ. ಸಂಖ್ಯೆಗಳ ಹಿಂದೆ ಹೋಗಬೇಡಿ ಎಂದು ನಮ್ಮ ಮಾಸ್ಟರ್‌ಗಳು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಮಾನವ ಮಟ್ಟದಲ್ಲಿ ನಮಗೆ ದುಃಖವಾಗುತ್ತದೆ. ಈ ಶುದ್ಧವಾದ ಜ್ಞಾನದಿಂದ ಮತ್ತು ಇಲ್ಲಿರುವ ಅತ್ಯಾಶ್ಚರ್ಯಕರ ಚೈತನ್ಯಗಳಿಂದ ಎಷ್ಟೊಂದು ಜನ ಪ್ರಯೋಜನ ಪಡೆಯಬಹುದು. ಹೇಗೇ ಆಗಲಿ ನಮ್ಮ ಕೆಲಸವನ್ನು ನಾವು ಮುಂದುವರಿಸೋಣ.

ಈ ಜ್ಞಾನವನ್ನು ಅಭಿವ್ಯಕ್ತಿಸುವುದು ನಮ್ಮ ಕೆಲಸ. ನಮ್ಮ ಅಭ್ಯಾಸಗಳನ್ನು ಉತ್ತಮಗೊಳಿಸಿಕೊಂಡು ಹೋಗುವುದು ನಮ್ಮ ಕೆಲಸ. ಅಭ್ಯಾಸದಲ್ಲಿ ಎರಡು ಭಾಗಗಳಿವೆ – ಧ್ಯಾನಮಾಡುವುದು ಮತ್ತು ಬದುಕುವುದು. ಅಭ್ಯಾಸದ ಈ ಎರಡೂ ಭಾಗಗಳನ್ನು ನಾವು ಉತ್ತಮಪಡಿಸಿಕೊಳ್ಳುತ್ತಾ ಹೋಗೋಣ. ಅದು ನಮ್ಮ ಕೆಲಸ. ಋಷಿಗಳ ಸಂಪರ್ಕ ಪಡೆಯುವುದು ನಮ್ಮ ಕೆಲಸ. ನಾವು ಬೆಳೆಯಬೇಕು, ಪ್ರೀತಿಯನ್ನು ಅಭಿವ್ಯಕ್ತಿಸಬೇಕು ಮತ್ತು ಕಾಯಬೇಕು. ನಾವು ಪರಿಪೂರ್ಣರಲ್ಲವೆಂದು ನನಗೆ ತಿಳಿದಿದೆ. ಈ ರೀತಿ ಹೇಳಿದಾಗಲೆಲ್ಲ ಅದು ನನ್ನ ಬಗ್ಗೆಯೇ ಹೇಳಿರುತ್ತೇನೆ. ನಾನು ಪರಿಪೂರ್ಣನಲ್ಲ ಮತ್ತು ನಾನು ಮಾಡುತ್ತಿರುವುದು ಸಾಕಾಗುತ್ತಿಲ್ಲವೆಂದು ನನಗೆ ತಿಳಿದಿದೆ. ನಾನು ಮತ್ತು ನಾವೆಲ್ಲರೂ ಪರಿಪೂರ್ಣರಾಗಬಯಸುತ್ತೇವೆ. ಅದಕ್ಕಾಗಿಯೇ ನಾವಿಲ್ಲಿ ಸೇರಿರುವುದು.

ನಾವು ಗುರೂಜಿಯವರ ಬೆಳಕಿನಿಂದ ಪ್ರಕಾಶಿಸಲು ಪ್ರಾರಂಭಿಸಿದರೆ ಬಹುಶಃ ಹೆಚ್ಚು ಜನರು ಇಲ್ಲಿಗೆ ಬರುತ್ತಾರೆ. ಜನರ ಸಂಖ್ಯೆ ಕಡಿಮೆಯಾಗುತ್ತಿರುವುದು, ನಾವು ಗುರೂಜಿಯವರ ಬೆಳಕಿನಿಂದ ಸಾಕಷ್ಟು ಪ್ರಕಾಶಿಸುತ್ತಿಲ್ಲವೆಂಬುದನ್ನು ಒಂದು ರೀತಿಯಲ್ಲಿ ಸೂಚಿಸುತ್ತದೆ. ನಾವಿದನ್ನು ಒಪ್ಪಿಕೊಳ್ಳಬೇಕು. ಅದನ್ನು ಒಪ್ಪಿಕೊಳ್ಳೋಣ ಮತ್ತು ಹೆಚ್ಚಿನ ಪ್ರಾಮಾಣಿಕ ಪ್ರಯತ್ನ ಮಾಡೋಣ. ಹೆಚ್ಚು ಜನ ಬಂದರೆ ಅವರಿಗೆ ಬಹಳ ಪ್ರಯೋಜನವಾಗುತ್ತದೆ. ಹಿರಿಯ ವಿದ್ಯಾರ್ಥಿಗಳು ಗುರೂಜಿಯವರ ಮೇಲೆ ಅಪಾರ ನಂಬಿಕೆ ಇಟ್ಟು ಸಾಧನೆಯನ್ನು ಮುಂದುವರಿಸುತ್ತಿರುವುದು ನನಗೆ ಸಂತೋಷ ತಂದಿದೆ. ಸಹಜವಾಗಿಯೇ ಹೊಸ ವಿದ್ಯಾರ್ಥಿಗಳೂ ಇದ್ದಾರೆ. ಸತ್ಯದ ಅನ್ವೇಷಣೆ ಮಾಡುತ್ತಾ ಜನರು ಬರುತ್ತಿದ್ದಾರೆ. ಇತ್ತೀಚಿನ ಒಂದೆರಡು ತಿಂಗಳಲ್ಲಿಯೇ ಬಹಳ ಜನರು ನಮ್ಮಲ್ಲಿಗೆ ಬಂದಿದ್ದಾರೆ – ಆಸ್ಟ್ರೇಲಿಯಾದಿಂದ, ಕೆನಡಾದಿಂದ. ಗುರೂಜಿಯವರ ಬೆಳಕು ಪ್ರಪಂಚದ ಎಲ್ಲ ಮೂಲೆಗಳನ್ನೂ ತಲುಪುತ್ತಿದೆ. ಅದು ಕೂಡ ವಾಸ್ತವವೇ. ಜನರು ಇಲ್ಲಿಗೆ ಬರುತ್ತಾರೆ. ಬೇರೆ ಬೇರೆ ಕಟ್ಟಡಗಳಲ್ಲಿ ಕುಳಿತು ಧ್ಯಾನ ಮಾಡುತ್ತಾರೆ, ಚೈತನ್ಯಗಳನ್ನು ಪಡೆದು ಹಿಂದಿರುಗುತ್ತಾರೆ. ಅವರು ನಮ್ಮ ತರಗತಿಗಳಿಗೆ ಬರದಿರಬಹುದು, ಅದು ಪರವಾಗಿಲ್ಲ. ಎಲ್ಲರೂ ತರಗತಿಗಳಿಗೆ ಬರಬೇಕಾಗಿಲ್ಲ. ಈ ಚೈತನ್ಯಗಳಿರುವುದು ಇಡೀ ಪ್ರಪಂಚಕ್ಕೆ. ಅವರು ಬರಲಿ, ನಮ್ಮ ಪುಸ್ತಕಗಳನ್ನು ಓದಲಿ, ಚೈತನ್ಯಗಳನ್ನು ಪಡೆದು ಹಿಂದಿರುಗಲಿ. ಹಾಗೇ ಆಗುತ್ತಿದೆಯೆಂದು ಭಾವಿಸುತ್ತೇನೆ.

ನಮ್ಮ ಸಂಪೂರ್ಣ ಸಾಮರ್ಥ್ಯದಷ್ಟು ಅಲ್ಲದಿದ್ದರೂ, ಸ್ವಲ್ಪ ಮಟ್ಟಿಗಾದರೂ ಮಾಸ್ಟರ್‌ಗಳ ಕೆಲಸಕ್ಕೆ ನಾವು ಪ್ರಯೋಜನವಾಗುತ್ತಿದ್ದೇವೆ. ಆ ರೀತಿಯಲ್ಲಿ ನನಗೆ ಸಂತೋಷವಿದೆ. ನಮ್ಮ 'ಲೈಟ್ ಚಾನಲ್ಸ್ ವಿಶ್ವ ಸಂಚಲನ'ವು ಪ್ರಪಂಚದಾದ್ಯಂತ ಹರಡುತ್ತಿದೆ. ಮಿಲಿಯಾಂತರ ಜನರು ಬೆಳಕನ್ನು ಚಾನಲ್ ಮಾಡುತ್ತಿದ್ದಾರೆ, ಲೈಟ್ ಚಾನಲಿಂಗ್‌ನಿಂದ ಮಿಲಿಯಾಂತರ ಜನರಿಗೆ ಪ್ರಯೋಜನವಾಗಿದೆ. ಮುಂದಿನ ಭಾನುವಾರ ಹಿಂದೂ ಹೊಸವರ್ಷವಾದ 'ಯುಗಾದಿ'ಯು ಪ್ರಾರಂಭವಾಗುತ್ತದೆ. ನಾವು ಅಮೂಲಾಗ್ರವಾಗಿ ಮತ್ತೊಮ್ಮೆ ಸಿದ್ಧರಾಗಿ ಸಾಧನೆಗೆ ಪುನಃ ಸಮರ್ಪಿಸಿಕೊಳ್ಳೋಣ.

---

ಗುರೂಜಿಯವರ ಭಾಷಣವೊಂದನ್ನು ಓದುತ್ತಿದ್ದಾಗ ಎದುರಾದ ಒಂದು ಸುಂದರ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ಧ್ಯಾನವೆಂದರೆ ಎಲ್ಲ ಮಟ್ಟಗಳಲ್ಲೂ, ಅಂದರೆ ದೇಹ, ಮನಸ್ಸು ಮತ್ತು ಬುದ್ಧಿಯ ಮಟ್ಟಗಳಲ್ಲಿ ನಿಶ್ಚಲತೆಯನ್ನು ಸ್ಥಾಪಿಸುವುದು ಎಂದು ನಮಗೆ ತಿಳಿದಿದೆ. ದೇಹಕ್ಕೆ ಅದರದೇ ಆದ ಬುದ್ಧಿಶಕ್ತಿಯಿದೆಯೆಂದೂ ನಮಗೆ ತಿಳಿದಿದೆ. ಅದೇ ರೀತಿ ಮನಸ್ಸು ಹಾಗೂ ಬುದ್ಧಿಗೂ ಅವುಗಳದೇ ಆದ ಬುದ್ಧಿಶಕ್ತಿಗಳಿವೆ. ದೇಹ, ಮನಸ್ಸು ಮತ್ತು ಬುದ್ಧಿಗಳಿಗೆ ಅವುಗಳದೇ ಆದ ವೈಯಕ್ತಿಕತೆ ಇರುತ್ತದೆಯೆಂದೂ ಗುರೂಜಿಯವರು ಹೇಳಿದ್ದರು. ನಿಶ್ಚಲತೆಯಲ್ಲಿ, ದೇಹ, ಮನಸ್ಸು ಮತ್ತು ಬುದ್ಧಿಗಳ ಬುದ್ಧಿಶಕ್ತಿಗಳು ಮತ್ತು ವೈಯಕ್ತಿಕತೆಗಳು ಮೂಲಕೇಂದ್ರದೊಂದಿಗೆ(core) ವಿಲೀನ–ಗೊಳ್ಳುತ್ತವೆಯೆಂದು ಅವರು ಹೇಳಿದ್ದರು. ಮೂಲಕೇಂದ್ರ ನಮ್ಮ ಆತ್ಮ, ಆ ರೀತಿಯ ವಿಲೀನವಾದಾಗ ಅದನ್ನು ಯೋಗ ಎಂದು ನಾವು ಕರೆಯಬಹುದು. ಯೋಗ ಎಂದರೆ ಸೇರುವಿಕೆ. ನಮ್ಮ ಇಡೀ ಶಾರೀರಿಕ ವ್ಯವಸ್ಥೆ ನಿಶ್ಚಲವಾಗಿದ್ದಾಗ ನಮ್ಮ ಮೂಲವು ಉನ್ನತ ಮೂಲದೊಂದಿಗೆ ವಿಲೀನವಾಗುತ್ತದೆ. ಉನ್ನತ ಮೂಲ ದೇವರೇ ಆಗಿದ್ದಾನೆ. ಇದು ಯೋಗದ ಮುಂದಿನ ಭಾಗ. ಇದನ್ನು ಉನ್ನತ ಯೋಗವೆಂದು ಕರೆಯಬಹುದು. ಪ್ರಾಥಮಿಕ ಯೋಗವೆಂದು ಕರೆಯಬಹುದಾದ ಈ ವೈಯಕ್ತಿಕ ಮಟ್ಟದ ವಿಲೀನವಿಲ್ಲದೆ, ಉನ್ನತ ಯೋಗ ಉಂಟಾಗುವುದಿಲ್ಲ. ಉನ್ನತ ಯೋಗದಲ್ಲಿ ದೇವರೇ ಆಗಿರುವ ಉನ್ನತ ಮೂಲದೊಂದಿಗೆ ನಾವು ವಿಲೀನವಾದಾಗ ದೇವರ ಸಂಪರ್ಕ ಹೊಂದುತ್ತೇವೆ. ಆಗ ದೇವರ ವಿವೇಕವನ್ನೂ ಪಡೆಯುತ್ತೇವೆ. ದೇವರ ಎಲ್ಲ ವಿವೇಕ ಮತ್ತು ಶಕ್ತಿ ನಮ್ಮೊಂದಿಗಿರುತ್ತದೆ. ಆಗ ನಮ್ಮ ಬದುಕು ಶಾಂತಿಯುತವಾಗಿರುತ್ತದೆ ಮತ್ತು ಅರ್ಥಪೂರ್ಣವಾಗಿರುತ್ತದೆ. ಆಗ ನಮಗೆ ಎಲ್ಲದರ ಅರಿವುಂಟಾಗುತ್ತದೆ. ಆ ನಂತರ ಬಹುಶಃ ನಾವು ತಿಳಿಯಬೇಕಾದುದು ಇನ್ನೇನೂ ಇರುವುದಿಲ್ಲ.

ಗುರೂಜಿಯವರು ಮಾತನಾಡಿದಾಗಲೆಲ್ಲ ತಮ್ಮ ಅನುಭವದಿಂದಲೇ ಮಾತನಾಡುತ್ತಿದ್ದರು. ಅವು ಸೈದ್ಧಾಂತಿಕ ಮಾತುಗಳಾಗಿರುತ್ತಿರಲಿಲ್ಲ. ಅವರ ಮಾತುಗಳು ಅನುಭವದಿಂದ ಬಂದವುಗಳು. ಯೋಗದಲ್ಲಿದ್ದಾಗ ನಮ್ಮಲ್ಲಿ ಯಾವುದೇ ಸನ್ನಿವೇಶವನ್ನು ಎದುರಿಸಲು ಬೇಕಾದ ವಿವೇಕವಿರುತ್ತದೆ. ಮನುಷ್ಯರೊಂದಿಗಷ್ಟೇ ಅಲ್ಲ, ನಿರ್ಜೀವ ವಸ್ತುಗಳೊಂದಿಗೂ ಸಂಪರ್ಕ ಸಾಧಿಸುವ ವಿವೇಕ ನಮ್ಮಲ್ಲಿರುತ್ತದೆ. ಈ ರೀತಿ ಸಂಪರ್ಕ ಸಾಧಿಸುವುದು ಅತಿ ಮುಖ್ಯ. ಈ ರೀತಿಯ ಸಾಮರಸ್ಯದ ಸಂಪರ್ಕವಿಲ್ಲದಿದ್ದರೆ ನಾವು ಶಾಂತಿಯಿಂದಿರಲು ಸಾಧ್ಯವಿಲ್ಲ. ಆದ್ದರಿಂದ ನಾವು ಶಾಂತಿಯಿಂದಿರುವುದಕ್ಕಾಗಿ ಮತ್ತು ಶಾಂತಿಯನ್ನು ಇತರರಿಗೆ ಹರಡುವುದಕ್ಕಾಗಿ, ಶಾಂತಿಯ ಪ್ರಕ್ರಿಯೆಯನ್ನು ನಮ್ಮೊಳಗೆ ಆರಂಭಿಸಬೇಕು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ-ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಒಂದು ಕನಸು

**ವೈಶಾಲಿ ಜೋಷಿ; ಅನು: ಸುಧಾಕರ್**

ತಪೋನಗರವು, ಈ ಭೂಮಿಯ ಮೇಲೆ ಸತ್ಯಯುಗವನ್ನು ಸ್ಥಾಪಿಸುವ ಋಷಿಗಳ ಬಹು ದೊಡ್ಡ ಕನಸಿನ ಮತ್ತು ದೂರದೃಷ್ಟಿಯ ಒಂದು ಭಾಗ. ಋಷಿಗಳು ಹಲವಾರು ವರ್ಷಗಳಿಂದ ಈ ಕನಸನ್ನು ಪೋಷಿಸಿಕೊಂಡು ಬಂದಿದ್ದಾರೆ. ಗುರೂಜಿಯವರು ಈ ಭೌತಿಕ ಮಟ್ಟದಲ್ಲಿ ಎದುರಿಸಬೇಕಾಗಿ ಬರುವ ಕಷ್ಟಗಳನ್ನು ತಡೆದುಕೊಳ್ಳಲು, ಅವರು ಜನ್ಮತಳೆಯುವ ಮೊದಲೇ ಅವರಿಗೆ ಋಷಿಗಳು ತರಬೇತಿ ನೀಡಿದ್ದರು. ಅವರ ಕೆಲಸವನ್ನು ಮುಂದುವರೆಸುವ ಗುರೂಜಿಯವರ ನಿರ್ಧಾರವನ್ನು ಪರೀಕ್ಷಿಸಿದ ನಂತರ, ಭೌತಿಕ ಮತ್ತು ಸೂಕ್ಷ್ಮ ಮಟ್ಟಗಳಲ್ಲಿ ಆಧ್ಯಾತ್ಮಿಕ ಕೆಲಸವನ್ನು ಮಾಡುವುದಕ್ಕಾಗಿ ಅವರಿಗೆ ಶಂಬಲದಲ್ಲಿ ಮತ್ತು ಇತರ ಲೋಕಗಳಲ್ಲಿ ತರಬೇತಿ ನೀಡಿದರು. ಅವರ ಕನಸನ್ನು ಸಾಕಾರಗೊಳಿಸಲು ಋಷಿಗಳಿಗೆ ಗುರೂಜಿಯವರು ನೆರವಾದರು ಹಾಗೂ ತಪೋನಗರವನ್ನು ಸ್ಥಾಪಿಸಿದರು.

ಅವರು ನಮ್ಮನ್ನೂ ಈ ಸುಂದರ ಕನಸಿನ ಭಾಗವಾಗಿಸಿದರು, ತಪೋನಗರದ ಪರಿಕಲ್ಪನೆಯನ್ನು ನಮಗೆ ಪರಿಚಯಿಸಿದರು ಮತ್ತು ಈ ಕನಸನ್ನು ಹಂಚಿಕೊಳ್ಳಲು ನಮಗೆ ತಿಳಿಸಿದರು. ಅವರು ಹೇಳಿದರು, "ತಪೋನಗರಕ್ಕೆ ಅದರದೆ ಆದ ಕನಸಿದೆ ಮತ್ತು ಅದರ ದೈವತ್ವ ಮತ್ತು ಸೌಂದರ್ಯದೊಂದಿಗಿನ ಬರೆದಿಲ್ಲದ ಕವಿತೆ ಮತ್ತು ಅಭಿವ್ಯಕ್ತಿಗೊಳ್ಳದಿರುವ ಬದುಕಿನ ಸಾರ ಅದಕ್ಕಿದೆ. ಇದೊಂದು ಬದುಕಿನ ಪವಿತ್ರ ಸ್ಥಳ – ಶಾಂತಿ, ಪ್ರೀತಿ, ಉನ್ನತ ಪರಿಪೂರ್ಣತೆಗಳ ದೈವೀ ಬದುಕು."

ಬೇರೆ ಬೇರೆ ರೀತಿಯ ಜನರನ್ನು ತಪೋನಗರ ಆಕರ್ಷಿಸುತ್ತದೆ. ನಾವೆಲ್ಲರೂ ಇಲ್ಲಿ ಸೇರಿರುವುದಕ್ಕೆ ಉನ್ನತ ಉದ್ದೇಶವಿದೆಯೆಂದು ಗುರೂಜಿಯವರು ಹೇಳಿದ್ದರು. ಈ ಉದ್ದೇಶವನ್ನು ಅರಿತುಕೊಂಡು, ಒಬ್ಬರನ್ನೊಬ್ಬರು ಪ್ರೀತಿಸುತ್ತಾ ಹೃತ್ಪೂರ್ವಕವಾಗಿ ನಗುವುದನ್ನು ಅವರು ಬಯಸಿದ್ದರು. ಅವರು ಹೇಳಿದರು, "ಪ್ರತಿಯೊಂದು ಆತ್ಮವೂ ತನ್ನದೇ ಬೆಳಕನ್ನು, ತನ್ನದೇ ಸಂಗೀತ, ಕವಿತೆ, ನೃತ್ಯ ಮತ್ತು ಕನಸುಗಳನ್ನು ತರುತ್ತದೆ. ಅವೆಲ್ಲವನ್ನು ಜೀವಂತಗೊಳಿಸುವ ಮತ್ತು ಇತರರೊಂದಿಗಿನ ಸಾಮರಸ್ಯವನ್ನು ವೃದ್ಧಿಸುವ ಸ್ಥಳ ಇದಾಗಿದೆ. ಎಲ್ಲ ಜನರು ಮತ್ತು ಅವರ ಅನ್ವೇಷಣೆಗಳು ತಪೋನಗರದ ಬದುಕನ್ನು ರೂಪಿಸುತ್ತದೆ. ಅದು ಸಕಾರಾತ್ಮಕ ಬದುಕು. ತಪೋನಗರದಲ್ಲಿ ಬದುಕನ್ನು ತಿರಸ್ಕರಿಸುವಂತಿಲ್ಲ, ತಪ್ಪಿಸಿಕೊಳ್ಳುವಂತಿಲ್ಲ, ದೂರ ಉಳಿಯುವಂತಿಲ್ಲ." ಅವರು ಮುಂದುವರೆದು ಹೇಳಿದರು, "ಇಲ್ಲಿನ ಬದುಕನ್ನು ಪೋಷಿಸುವುದಕ್ಕಾಗಿ, ತಪೋನಗರದ ಕನಸುಗಳಿಗೆ ಬಲ ಒದಗಿಸುವುದಕ್ಕಾಗಿ ಮತ್ತು ಕನಸುಗಳನ್ನು ಸಾಕಾರಗೊಳಿಸುವುದಕ್ಕಾಗಿ, ಋಷಿಗಳು ಚೈತನ್ಯ ವಲಯಗಳನ್ನು ಕಟ್ಟಿದ್ದಾರೆ."

ಋಷಿಗಳ ಈ ಕನಸಿನ ಭಾಗವಾಗುವ ಅದ್ಭುತ ಅವಕಾಶ ದೊರಕಿರುವುದರಿಂದ ನಾವು ಪುಣ್ಯಶಾಲಿಗಳು. ಈ ಸ್ಥಳವು ನಮಗೆ ಒದಗಿಸಲು ಕಾತರಿಸುತ್ತಿರುವ ಅವಕಾಶಗಳಿಗೆ ಮತ್ತು ಅನುಭವಗಳಿಗೆ ನಾವು ತೆರೆದುಕೊಳ್ಳೋಣ. ■

## ಮಿತಭಾಷಿ ಗುರೂಜಿ

**ಕೀರ್ತಿ ಬಿಸರಹಳ್ಳಿ; ಅನು: ಪಾಂಡುರಂಗ**

ಗುರೂಜಿ ಒಮ್ಮೆ ಹೇಳಿದ್ದರು, "ನೀವು ಮಾತನಾಡಿದಾಗ ಅದು ವೇದಗಳಂತೆ ಇರಬೇಕು." ಅವರು ಮಾತನಾಡಿದ ಪ್ರತಿಯೊಂದು ಪದವೂ, ಸಾಮಾನ್ಯ ಮನುಷ್ಯನಿಗೆ ಸರಳೀಕರಿಸಿದ ವೇದಗಳಂತೆ ಇರುತ್ತಿದ್ದವು. ನಾನು ಮೊದಲ ಬಾರಿ ಗುರೂಜಿಯವರನ್ನು ಭೇಟಿಯಾದಾಗ, ತತ್‌ಕ್ಷಣದಲ್ಲಿಯೇ ಅವರೊಂದಿಗೆ ಸಂಪರ್ಕ ಪಡೆದಿದ್ದೆ. ಅವರು ವಿಶ್ವಾಸಾರ್ಹ ವ್ಯಕ್ತಿ ಎಂದು ನಾನು ಕಂಡುಕೊಂಡೆ. ಆ ಸಮಯದಲ್ಲಿ ಬಹುಶಃ ಅವರ ಆಕರ್ಷಕ ನಗು, ಅವರಲ್ಲಿದ್ದ ಅದ್ಭುತ ಹಾಸ್ಯ ಪ್ರಜ್ಞೆ, ಅವರ ಕಣ್ಣುಗಳಲ್ಲಿನ ಮಿಂಚು ಮತ್ತು ಅವರ ಸ್ನೇಹಯುತ ನಿಷ್ಕಲ್ಮಷ ಪ್ರೀತಿ – ಇವೆಲ್ಲವೂ ಅವರ ಮೇಲಿನ ವಿಶ್ವಾಸಾರ್ಹತೆಗೆ ಕಾರಣಗಳಾಗಿದ್ದವು.

ಸುದೀರ್ಘ ಪತ್ರಗಳಿಗೆ ಅವರು ಸ್ಪಂದಿಸುವಾಗ, ಅವರ ಉತ್ತರಗಳು ಬಹಳ ಸರಳವಾದ ಹೌದು ಅಥವಾ ಇಲ್ಲ ಅಥವ ಒಂದು ಟಿಕ್ ಮಾರ್ಕ್ ಅಥವ ಸಂಬಂಧಿತ ವಿಷಯಗಳಿಗೆ ಅಂಡರ್‌ಲೈನ್ ಆಗಿರುತ್ತಿತ್ತು! ಅವರು ಯಾವಾಗಲೂ ಒಂದೇ ಒಂದು ಪದದಲ್ಲಿ ಅಥವಾ ಪ್ರಾಯಶಃ ಒಂದು ವಾಕ್ಯದಲ್ಲಿ ಮಾರ್ಗದರ್ಶನ ಮಾಡುತ್ತಿದ್ದರು. ನಾವೇ ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸುತ್ತಿದ್ದರು. ನಮಗೆ ಇರುವ ಆಯ್ಕೆಗಳನ್ನು ಬರೆಯುವಂತೆ ಮತ್ತು ಅವುಗಳಲ್ಲಿ ಬಹಳ ಸೂಕ್ತವೆನಿಸಿದ್ದನ್ನು ಆರಿಸಿಕೊಂಡು ಅದರಂತೆ ಮುಂದುವರಿಯಲು ಹೇಳುತ್ತಿದ್ದರು; ಅದರ ಫಲದ ಜವಾಬ್ದಾರಿಯನ್ನು ನಾವೇ ವಹಿಸಿಕೊಳ್ಳಲು ಹೇಳುತ್ತಿದ್ದರು. ಅದು ನಮ್ಮನ್ನು ಸ್ವತಂತ್ರರನ್ನಾಗಿ ಮತ್ತು ಶಕ್ತಿಶಾಲಿಗಳನ್ನಾಗಿ ಮಾಡುತ್ತಿತ್ತು.

ಗುರೂಜಿಯವರ ಕಡಿಮೆ ಪದಗಳಲ್ಲಿ ವಿವೇಕದ ಭಂಡಾರವೇ ತುಂಬಿರುತ್ತಿತ್ತು, ಕಾರಣ ಅವು ಯಾವತ್ತೂ ಕೇವಲ ಪದಗಳಾಗಿರುತ್ತಿರಲಿಲ್ಲ. ಆ ಪದಗಳಲ್ಲಿ ಚೈತನ್ಯಗಳು ಮತ್ತು ಅವರ ನಿಷ್ಕಲ್ಮಷವಾದ ಪ್ರೀತಿ ಇರುತ್ತಿದ್ದವು.

ಗುರೂಜಿ ಯಾವಾಗಲೂ, ನಿಯಮವನ್ನು ಮತ್ತು ಅದನ್ನು ನಮ್ಮ ದಿನನಿತ್ಯದ ಜೀವನದಲ್ಲಿ ಪಾಲಿಸಲು ಸರಳವಾದ ಟೆಕ್ನಿಕ್‌ವೊಂದನ್ನು ಕೊಡುತ್ತಿದ್ದರು. ಅದನ್ನು ಹೇಗೆ ಆಚರಣೆಗೆ ತರಬೇಕೆನ್ನುವ ವಿವರಗಳನ್ನು ಕಂಡುಕೊಳ್ಳಲು ನಮಗೇ ಬಿಡುತ್ತಿದ್ದರು. ಅದನ್ನು ಅವರ ಚಿಂತನೆಯಂತೆ ಮತ್ತು ಅವರ ವಿಧಾನಗಳಂತೆ ಮಾಡಬಹುದಾಗಿತ್ತು, ಹೀಗೇ ಮಾಡಬೇಕೆಂದು ಯಾರೊಬ್ಬರನ್ನೂ ಎಂದಿಗೂ ಒತ್ತಾಯಿಸುತ್ತಿರಲಿಲ್ಲ. ಸರಿಯಾದ ದಿಕ್ಕಿನಲ್ಲಿ ಮುಂದುವರಿಯಲು ಕೆಲವು ಪರೋಕ್ಷ ಸಲಹೆಗಳನ್ನು ಕೊಡುತ್ತಿದ್ದರು. ನಮ್ಮಲ್ಲಿನ ಸೃಜನಶೀಲತೆಗೆ ಅಥವಾ ನಮ್ಮ ನಿಲುವುಗಳಿಗೆ ಅವರು ಯಾವತ್ತೂ ಅಡ್ಡಿ ಪಡಿಸುತ್ತಿರಲಿಲ್ಲ.

ಅವರು ವಿಶ್ವವ್ಯಾಪಿ ಮೌಲ್ಯಗಳನ್ನು, ವ್ಯಾಖ್ಯಾನಗಳ ಮೂಲಕ ಮತ್ತು ಗ್ರಂಥಗಳನ್ನು ಉಲ್ಲೇಖಿಸುವ ಮೂಲಕ ನಿರೂಪಿಸುತ್ತಿರಲಿಲ್ಲ, ಬದುಕಿ ತೋರಿಸುತ್ತಿದ್ದರು. ಅವರು ನಮ್ಮ ದಿನನಿತ್ಯದ ಜೀವನದಲ್ಲಿ ಅಧ್ಯಾತ್ಮಿಕತೆಯನ್ನು ತಂದರು. ಅವರ ಬೋಧನೆಗಳು ಸರಳತೆ, ಸ್ಪಷ್ಟತೆ, ಮತ್ತು ಸಂಕ್ಷಿಪ್ತತೆಗೆ ಹೆಸರಾಗಿತ್ತು. ನಮ್ಮನ್ನು ಉತ್ತಮಗೊಳಿಸಿಕೊಳ್ಳುವುದಕ್ಕಾಗಿ ನಾವಿಡುವ ಅಂಬೆಗಾಲಿನ ಹೆಜ್ಜೆಗಳನ್ನು ಅವರು ಮೌನವಾಗಿ ಗಮನಿಸುತ್ತಿದ್ದರು ಮತ್ತು ಅವರ ನಿಷ್ಕಲ್ಮಷ ಪ್ರೀತಿಯಿಂದ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದರು ಮತ್ತು ಆಸರೆಯಾಗಿದ್ದರು. ನಮ್ಮ ಪ್ರಯತ್ನಗಳಲ್ಲಿ ನಾವು ಸೋತಾಗಲೂ ನಮ್ಮ ಬಗ್ಗೆ ಯಾವುದೇ ಅಭಿಪ್ರಾಯ ತಳೆಯುತ್ತಿರಲಿಲ್ಲ.

ಕಡಿಮೆ ಮಾತನಾಡುತ್ತಿದ್ದರೂ, ಅವರು ವಿವೇಕದ ಗಣಿಯೇ ಆಗಿದ್ದರು. ಅವರ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರ ಜೀವನದಲ್ಲಿ, ತಮ್ಮ ಛಾಪನ್ನು ಬಿಟ್ಟು ಹೋದರು. ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ಒಬ್ಬ ಗುರುವಿಗೆ ಅನ್ವಯಿಸುವ ಕರ್ಮದ ನಿಯಮಗಳು, ಸಾಮಾನ್ಯ ಜನರಿಗೆ ಅನ್ವಯಿಸುವ ಕರ್ಮದ ನಿಯಮಗಳಿಗಿಂತ ಬೇರೆಯೇ?**

ಉ: ಬೇರೆಯವರಿಗೆ ಅನ್ವಯಿಸುವ ಎಲ್ಲ ನಿಯಮಗಳನ್ನು ಗುರುವೂ ಪಾಲಿಸಬೇಕು. ಇದು ಬಹಳ ಮುಖ್ಯ. ಅಮರರವರು ಎಲ್ಲ ಯುಗಗಳಲ್ಲೂ ಜೀವಿಸಿದ್ದರು. ಅಮರರವರು ಯಾವಾಗಲೂ ಪ್ರಮುಖ ವ್ಯಕ್ತಿಯಾಗಿದ್ದರು. ದೇವರು ಅವತಾರವೆತ್ತಿ ಮಾನವ ದೇಹ ಧಾರಣೆ ಮಾಡಿದಾಗ, ಮಾನವರ ನಿಯಮಗಳನ್ನು ಅವರೂ ಅನುಸರಿಸುತ್ತಾರೆ ಎಂದು ಅವರು ನಮಗೆ ಹೇಳಿದ್ದಾರೆ. ಗುರು ಕೂಡ ಬೇರೆಯವರಿಗಿಂತ ಭಿನ್ನವೇನಲ್ಲ. ನಾನು ಅವರನ್ನು ಹಿರಿಯ ವಿದ್ಯಾರ್ಥಿಗಳೆಂದು ಕರೆಯುತ್ತೇನೆ. ಅವರು ಹೆಚ್ಚು ಹೆಚ್ಚು ಕಲಿಯುತ್ತ ಹೊಸ ಜ್ಞಾನವನ್ನು ಹರಡುವುದಕ್ಕೆ ಪ್ರಯತ್ನಿಸುತ್ತಾರೆ. ಆದರೆ, ಅವರು ಕೆಲವು ವಿಶೇಷ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಇಲ್ಲಿ, ಅವುಗಳಲ್ಲಿ ಕೆಲವನ್ನು ತಿಳಿಸಲು ಪ್ರಯತ್ನಿಸುತ್ತೇನೆ.

ವಿದ್ಯಾರ್ಥಿಯ ಕರ್ಮಗಳ ಸ್ವಲ್ಪ ಭಾಗವನ್ನು ಗುರು ತೆಗೆದುಕೊಳ್ಳಬೇಕಾಗುತ್ತದೆ. ಇದು ಕರ್ಮದ ಒಂದು ವಿಶೇಷ ನಿಯಮ. ಧ್ಯಾನ ಮಾಡುವುದರ ಮೂಲಕ, ಅವರು ಈ ಕರ್ಮಗಳನ್ನು ನಿವಾರಣೆ ಮಾಡಿಕೊಳ್ಳಬೇಕಾಗುತ್ತದೆ, ಅಥವಾ ಕೆಲವು ವೇಳೆ ಸ್ವತಃ ಅವರೇ ಕರ್ಮಗಳನ್ನು ಅನುಭವಿಸಬೇಕಾಗುತ್ತದೆ. ಗುರುವಿಗೆ, ಅವರ ಗುರುಗಳು ಸಹಾಯ ಮಾಡುತ್ತಿರುತ್ತಾರೆ. ನನ್ನ ವಿಷಯದಲ್ಲಿ, ಇಂತಹ ವಿಷಯಗಳಲ್ಲಿ ಋಷಿಗಳು ಮತ್ತು ದೇವರು ನನಗೆ ಸಹಾಯ ಮಾಡುತ್ತಾರೆ.

ಧ್ಯಾನ ಮಾಡುವುದಕ್ಕೆ ಆಗುತ್ತಿಲ್ಲವೆಂದು ಕೆಲವೊಮ್ಮೆ ಜನರು ಹೇಳುತ್ತಾರೆ. ಅವರಿಗೆ ಪ್ರಮಾಣಿಕ ಕಾರಣಗಳಿರುತ್ತವೆ. ಅವರಿಗೆ ಧ್ಯಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಜನರನ್ನು, ಸಾಧನೆಯ ಮುಂದಿನ ಹಂತಕ್ಕೆ ಕರೆದುಕೊಂಡು ಹೋಗುವ ಅಧಿಕಾರ ಒಬ್ಬ ಗುರುವಿಗೆ ಇರುತ್ತದೆ. ನಮಗೆ ಭೌತಿಕ ಮಟ್ಟದಲ್ಲಿ ಕಷ್ಟಗಳಿದ್ದಾಗ, ಸಾಧನೆಯಲ್ಲಿ ಅಥವ ಧ್ಯಾನದಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಅಂತಹ ಅಡಚಣೆಗಳನ್ನು ಗುರು ತೆಗೆದುಹಾಕಬಲ್ಲರು.

ಒಬ್ಬ ವ್ಯಕ್ತಿಯ ಆಧ್ಯಾತ್ಮಿಕ ಪ್ರಯತ್ನಗಳಿಗೆ ಅಥವಾ ಸಾಧನೆಗೆ ಸಹಾಯ ಮಾಡುವಾಗ, ಗುರು ಕೆಲವು ನಿಯಮಗಳನ್ನು ಮುರಿಯಬಹುದು. ಗುರು ವಿಶೇಷ ನಿಯಮಗಳಿಗೆ ಬದ್ಧರಾಗಿರುತ್ತಾರೆಂದು ಈ ಕಾರಣಕ್ಕಾಗಿಯೇ ನಾನು ಹೇಳಿದ್ದು. ಅವರಿಗೆ ವಿದ್ಯಾರ್ಥಿಗಿಂತ ಹೆಚ್ಚಿನ ಜವಾಬ್ದಾರಿ ಇರುತ್ತದೆ. ಪ್ರಾರಂಭದಲ್ಲಿ ಒಬ್ಬ ವಿದ್ಯಾರ್ಥಿ ಸಹಜವಾಗಿಯೇ ಬಹಳಷ್ಟು ವಿಷಯಗಳ ಬಗ್ಗೆ ಅಜ್ಞಾನಿಯಾಗಿರುತ್ತಾನೆ. ಅವನು, ಕೇವಲ ಮಾರ್ಗದರ್ಶನಕ್ಕಾಗಿ ಮಾತ್ರವಲ್ಲದೆ ಜ್ಞಾನಕ್ಕಾಗಿ ಕೂಡ ಗುರುವಿನ ಬಳಿ ಬರುತ್ತಾನೆ. ಒಬ್ಬ ಗುರು ಕನ್ನಡಿಯೂ ಆಗಿರುತ್ತಾರೆ. ಗುರು, ತನ್ನ ವಿದ್ಯಾರ್ಥಿಗಳಿಗೆ ಅವರ ಶಕ್ತಿಗಳು ಮತ್ತು ದೌರ್ಬಲ್ಯಗಳನ್ನು ಗುರುತಿಸಿಕೊಳ್ಳಲು ಸಹಾಯ ಮಾಡುತ್ತಾರೆ.

ಒಬ್ಬ ಗುರು ಕಾಲ ಕಾಲಕ್ಕೆ ತನ್ನ ವಿದ್ಯಾರ್ಥಿಗಳ ವರದಿಗಳನ್ನು ಸಲ್ಲಿಸಬೇಕು. ನಾನು ಕೂಡ ಅದನ್ನು ಮಾಡುತ್ತೇನೆ. ಗುರು ತನ್ನ ಗುರುಗಳಿಗೆಲ್ಲ ಉತ್ತರಿಸಬೇಕಾಗುತ್ತದೆ; ಇಲ್ಲಿ ನಾನು ಋಷಿಗಳಿಗೆ ಉತ್ತರಿಸಬೇಕು. ಪ್ರತಿಯೊಬ್ಬರ ಜೀವನವನ್ನು ಮತ್ತು ಪ್ರಗತಿಯನ್ನು ಋಷಿಗಳು ಗಮನಿಸುತ್ತಾರಾದರೂ, ಗುರು ಕೂಡ ಆ ಕೆಲಸವನ್ನು ಮಾಡುತ್ತಾರೆ. ಗುರು ಭೌತಿಕವಾಗಿ ಇಲ್ಲಿ ಜೀವಿಸಿರುವುದರಿಂದ, ಹೆಚ್ಚು ಅರ್ಥ ಮಾಡಿಕೊಳ್ಳುತ್ತಾರೆ. ಆದ್ದರಿಂದ ಮಾನವ ಗುರುವನ್ನು ಆಗಾಗ್ಗೆ ಭೇಟಿ ಮಾಡುವುದು ಬಹಳ ಮುಖ್ಯ. ಇಲ್ಲಿನ ವ್ಯವಸ್ಥೆಯಲ್ಲಿ ದೂರ ಕಲಿಕೆಯ ವ್ಯವಸ್ಥೆಯೂ ಸರಿಯಾಗಿಯೇ ಇದೆ. ವಿದ್ಯಾರ್ಥಿಗಳಿಂದ ನಮಗೆ ವರದಿಗಳು ಬರುತ್ತವೆ. ವರದಿಗಳ ಅಧ್ಯಯನ ಮಾಡಿ ಸಲಹೆಗಳು ಮತ್ತು ಮಾರ್ಗದರ್ಶನವನ್ನು ನೀಡಲಾಗುತ್ತದೆ. ಇಲ್ಲಿ ಒಂದು ವೈಯಕ್ತಿಕ ಸಂಬಂಧ ಇರುತ್ತದೆ. ಒಬ್ಬ ಗುರು ತನ್ನ ಅನುಯಾಯಿಗಳನ್ನು ಆರಿಸಿಕೊಳ್ಳುತ್ತಾರೆ. ನೀವು ಜನಿಸುವ ಮೊದಲೇ ಋಷಿಗಳು ನಿಮ್ಮನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದೊಂದು ಮಹಾನ್ ಅವಕಾಶ. ಗುರುವಿಗೆ ಬಹಳ ಜವಾಬ್ದಾರಿಗಳು ಇರುವ ಹಾಗೆಯೇ ವಿದ್ಯಾರ್ಥಿಗೂ ಬಹಳ ಜವಾಬ್ದಾರಿಗಳಿರುತ್ತವೆ.

ಈ ಸೃಷ್ಟಿಯಲ್ಲಿ ಪ್ರತಿಯೊಬ್ಬರಿಗೂ ಎರಡು ರೀತಿಯ ನಿಯಮಗಳಿರುತ್ತವೆ. ಮೊದಲನೆ ರೀತಿಯ ನಿಯಮಗಳು, ನಾವು ಜೀವಿಸಿರುವ ಈ ಭೂಮಿಯ ನಿಯಮಗಳು. ಎರಡನೆ ರೀತಿಯ ನಿಯಮಗಳು, ಸತ್ಯ ಮತ್ತು ಶಾಂತಿಯಂತಹ ವಿಶ್ವವ್ಯಾಪಿ ನಿಯಮಗಳು. ಇಲ್ಲಿ ರಾಜಿ ಮಾಡಿಕೊಳ್ಳಲು ಯಾವುದೇ ಅವಕಾಶವಿಲ್ಲ.


**ಪ್ರ: ಪರಬ್ರಹ್ಮನನ್ನು ಅರ್ಥಮಾಡಿಕೊಳ್ಳಲು ನಿಮಗೆ ಬಹಳಷ್ಟು ಸಮಯ ಬೇಕಾಯಿತು ಎಂದು ಹೇಳಿದ್ದೀರಿ. ಅದನ್ನು ನಮಗೆ ವಿವರಿಸಿ ಹೇಳುವಿರಾ?**

ಉ: ಇದು ಸರಳ. ನಾನು ಚಿಕ್ಕ ಹುಡುಗನಾಗಿದ್ದಾಗಲೇ, ಮನೆಯಲ್ಲಿ ಮತ್ತು ದೇವಸ್ಥಾನಗಳಲ್ಲಿ ವಿಗ್ರಹಗಳನ್ನು ಪೂಜಿಸುತ್ತಿದ್ದೆ. ಬ್ರಹ್ಮ ಸೃಷ್ಟಿಕರ್ತನೆಂದು ನನಗೆ ಗೊತ್ತಿತ್ತು, ಆದರೆ ಪರಬ್ರಹ್ಮನ ಬಗ್ಗೆ ನನಗೆ ಗೊತ್ತಿರಲಿಲ್ಲ. ಅಮರರವರನ್ನು ಭೇಟಿಯಾದ ನಂತರವಷ್ಟೇ ಈ ವಿಷಯಗಳು ನನಗೆ ಸ್ಪಷ್ಟವಾಗಿ ಅರ್ಥವಾದವು. ನಿರಾಕಾರ ದೇವರಿಂದಲೇ ಎಲ್ಲ ರೂಪಗಳೂ ಬಂದಿವೆಯೆಂದು ಅರಿತುಕೊಂಡೆ. ನಾವು ದೇವರನ್ನು ಬೆಳಕು, ಪ್ರಜ್ಞಾ ಸಾಗರ ಅಥವ ಹೇಗಾದರೂ ಕರೆಯಬಹುದು. ಆತನೇ ಪರಬ್ರಹ್ಮ. ಇದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ನನಗೆ ಬಹಳ ಸಮಯ ಬೇಕಾಯಿತು. ಬುದ್ಧಿ ಮಟ್ಟದಲ್ಲಿ ಅರ್ಥ ಮಾಡಿಕೊಳ್ಳುವುದು ಒಂದು ರೀತಿಯಾದರೆ, ಅನುಭವಿಸುವುದು ಮತ್ತೊಂದು ರೀತಿ. ಅಮರರವರಿಂದ ಮಾರ್ಗದರ್ಶನ ಪಡೆದ ಜನರು ಪರಬ್ರಹ್ಮನ ಅನುಭವ ಪಡೆದರು. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 | 200/- |
| Thus Spoke Guruji Krishnananda - Vol 2 | 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु-शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಮಾನಸ ಪ್ರಕಾಶನದ ಪುಸ್ತಕಗಳನ್ನು ನಿಯತವಾಗಿ ಓದುವುದರಿಂದ ನಮ್ಮ ಧ್ಯಾನದ ಗುಣ ಮಟ್ಟ ಹೆಚ್ಚುತ್ತದೆ. ಪ್ರತಿನಿತ್ಯದ ಧ್ಯಾನದಿಂದ ಪುಸ್ತಕಗಳಲ್ಲಿ ಹುದುಗಿರುವ ವಿಷಯಗಳ ಬಗ್ಗೆ ಹೆಚ್ಚಿನ ಅರಿವು ಉಂಟಾಗುತ್ತದೆ. ಎರಡೂ ಸಹ ಒಂದು ಗಾಡಿಯ ಎರಡು ಚಕ್ರಗಳಂತೆ ಒಂದಕ್ಕೊಂದು ಪೂರಕವಾಗಿವೆ. ನಾನು ನಮ್ಮ Doorways to Light ಮಾಸ ಪತ್ರಿಕೆ ಓದಿದಾಗಲೆಲ್ಲ ಧ್ಯಾನವನ್ನು ಬದುಕಿನ ವಿಧಾನವನ್ನಾಗಿ ಮಾಡಿಕೊಳ್ಳಲು ಅದು ಸ್ಫೂರ್ತಿ ನೀಡುತ್ತದೆ.

– ರಾಜೇಂದ್ರ ರಂಗ್ನೇಕರ್

ಅಂತರಂಗದ ಸಂತೋಷವನ್ನು ನಾನು ನಿರಂತರವಾಗಿ ಅನುಭವಿಸುತ್ತಿದ್ದೇನೆ. ಎಂತಹ ಸಂದರ್ಭದಲ್ಲೂ ನಾನು ಪ್ರಶಾಂತವಾಗಿರುತ್ತೇನೆ. ಅಸಂತೋಷಕರ ಸಂದರ್ಭಗಳಲ್ಲೂ ಸಕಾರಾತ್ಮಕವಾಗಿಯೇ ಇರುತ್ತೇನೆ ನಾನು ಯಾವಾಗಲೂ ಒಂಟಿಯಲ್ಲ, ಬೆಳಕು ಹಾಗೂ ಗುರೂಜಿ ನನ್ನೊಡನಿರುವರೆಂಬ ಭಾವನೆ ಯಾವಾಗಲೂ ಇರುತ್ತದೆ.

– ಅನ್ನೆ ಚಾಪ್‌ಮನ್

ನಾನು ವಾಹನವನ್ನು ಓಡಿಸಿಕೊಂಡು ಕೆಲಸಕ್ಕೆ ಹೋಗುತ್ತಿದ್ದಾಗ ರಸ್ತೆಯಲ್ಲಿದ್ದ ವ್ಯಕ್ತಿಗಳನ್ನು ಗಮನಿಸುತ್ತಿದ್ದೆ. ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ವ್ಯಕ್ತಿಯನ್ನು ನೋಡಿದೆ, ಇದ್ದಕ್ಕಿದ್ದ ಹಾಗೆ ಅವನಲ್ಲಿ ದೇವರನ್ನು ಕಂಡೆ. ನಂತರ ಮತ್ತೊಬ್ಬನನ್ನು ನೋಡಿದೆ, ಅವನು ಕೂಡ ದೇವರೆ ಆಗಿದ್ದ. ಇದ್ದಕ್ಕಿದ್ದ ಹಾಗೆ ಎಲ್ಲ ಜನರು, ಪ್ರಾಣಿಗಳು ದೇವರಾಗಿಯೇ ಕಂಡರು. ಏಕಕಾಲದಲ್ಲಿಯೇ ಅವರನ್ನು ಪ್ರತ್ಯೇಕ ವ್ಯಕ್ತಿಗಳಾಗಿಯೂ ಮತ್ತು ದೇವರಾಗಿಯೂ ಗುರುತಿಸಿದೆ. ಈ ಅನುಭವ 2 – 3 ನಿಮಿಷಗಳವರೆಗೆ ಮುಂದುವರೆಯಿತು.

ಇತ್ತೀಚೆಗೆ ಶೃಂಗೇರಿಯಲ್ಲಿ ನಾವುಗಳು ಮೂರನೆಯ ಕಣ್ಣು ಹೇಗೆ ಸತ್ಯವನ್ನು ಕಂಡುಕೊಳ್ಳುತ್ತದೆ ಎಂಬುದರ ಬಗ್ಗೆ ಚರ್ಚಿಸುತ್ತಿದ್ದೆವು. ನಾನು ಕಣ್ಮುಚ್ಚಿ ಅದು ಹೇಗೆ ಘಟಿಸುತ್ತದೆಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ತಕ್ಷಣ ನನಗೆ ಒಂದು ಅಪೂರ್ವವಾದ ಶಾರದಾದೇವಿಯ ಸಾನ್ನಿಧ್ಯದ ಅನುಭವವಾಗಿ ಇಡೀ ಶೃಂಗೇರಿಗೇ ಅದು ಹರಡಿತು. ಆ ಪರಮಸುಖ ಅತ್ಯಂತ ಪ್ರೀತಿಯಿಂದಿದ್ದು ನನ್ನ ದೇಹದ ಪ್ರಜ್ಞೆ ಕೆಲ ಕ್ಷಣ ಕಳೆದು ಹೋಯಿತು.

– ಸುನಿಲ್ ಬಿಸರಹಳ್ಳಿ

ಕೆಲವುಸಲ ನಾನು ಬೆಳಕಿನಿಂದ ಬೇರ್ಪಟ್ಟು, ನಾನು ಬೇರೊಬ್ಬ ವ್ಯಕ್ತಿ ಎನ್ನುವಂತೆ ನನ್ನ ದೇಹದಲ್ಲಿ ಬೆಳಕಿನ ಅನುಭವವನ್ನು ಗಮನಿಸುತ್ತೇನೆ. ಕೆಲವು ಸಲ ಬೆಳಕಿನೊಂದಿಗೇ ಬೆರೆತು ಹೋಗುತ್ತೇನೆ.

– ಸಂಜಯ್ ಮನೋಹರ್

ಜನವರಿ ಒಂದರಂದು ಬೆಳಿಗ್ಗೆ ಹೊಸವರ್ಷದ ಪುರುಷನನ್ನು ಸ್ವಾಗತಿಸಿ, ಅವರ ಎದೆಯ ಮಧ್ಯಭಾಗದಲ್ಲಿ ನಾನು ಒಂದು ಕಿರಣವಾಗಿ ಸೇರಿಕೊಂಡಾಗ ಈ ಧ್ವನಿ ಕೇಳಿಬಂತು, "ಧ್ಯಾನವನ್ನು ಹೆಚ್ಚಾಗಿ ಮಾಡು. ಈ ವರ್ಷ ಎಷ್ಟು ಕಠಿಣವೋ ಅಷ್ಟೇ ಸುಂದರವಾಗಿದೆ. ಈ ಸಮಯದಲ್ಲಿ ನಿನಗೆ ಕಲ್ಕಿ ಭಗವಾನರ ಸಹಾಯ ದೊರೆಯುತ್ತದೆ." ಈ ಧ್ವನಿ ನನ್ನ ಮನಸ್ಸಿನಿಂದ ಬಂದಿರಬಹುದೇ ಎಂದು ಆಶ್ಚರ್ಯಪಟ್ಟೆ. ಆ ಧ್ವನಿಗೆ ಬೆಲೆ ಕೊಟ್ಟು ಈಗ ನಾನು ಧ್ಯಾನ ಹಾಗೂ ಬೆಳಕಿನ ಸಂಚಲನವನ್ನು ಹೆಚ್ಚು ಸಮಯ ಮಾಡುತ್ತೇನೆ. ಋಷಿಗಳಿಗೆ ನಾನು ಚಿರಋಣಿ.

– ವೈಶಾಲಿ ತಾರೆ

ನಾನು ಧ್ಯಾನ ಮಾಡುವಾಗ ಎಲ್ಲಾ ಚಕ್ರಗಳಲ್ಲೂ ಶಕ್ತಿಯ ಹರಿವು ಹಾಗೂ ಕಂಪನವನ್ನು ಅನುಭವಿಸುತ್ತೇನೆ. ನಾನು ಅನಾಹತ, ಆಜ್ಞ ಹಾಗೂ ಸಹಸ್ರಾರ ಚಕ್ರದಲ್ಲಿ ಹೆಚ್ಚು ಗಮನ ಕೇಂದ್ರೀಕರಿಸಿದಾಗ ನಿಶ್ಶಬ್ದತೆಯು ವಿಸ್ತರಿಸುತ್ತಿರುವಂತೆನಿಸುತ್ತದೆ.

– ಗಣಪತಿ. ಆರ್

ನನ್ನ ದಿನನಿತ್ಯದ ಸನ್ನಿವೇಶಗಳನ್ನು ಬೇರಾರೋ ನಿಯಂತ್ರಿಸುವಂತೆನಿಸುತ್ತದೆ. ಯಾವುದೋ ಶಕ್ತಿ ಹೊರಗಿನಿಂದ ನನಗೆ ಮಾರ್ಗದರ್ಶನ ಮತ್ತು ಸಹಾಯಮಾಡಿ ಎಲ್ಲವನ್ನೂ ನೋಡಿಕೊಳ್ಳುತ್ತದೆ. ನನ್ನ ಕೃತಜ್ಞತೆಗಳನ್ನು ಋಷಿಗಳಿಗೆ ಅರ್ಪಿಸುತ್ತೇನೆ.

– ನಿಖಿಲ್ ಸಮುದ್ರ

ನನ್ನ ಜೀವನದಲ್ಲಿ ಕಷ್ಟವಿದ್ದರೂ, ಪ್ರತಿ ನಿತ್ಯ ಧ್ಯಾನ ಮಾಡಲಾಗದಿದ್ದರೂ, ಭಗವಂತನಿಗೆ ಶರಣು ಹೋಗಿರುವುದರಿಂದ, ಅವನೇ ನನ್ನನ್ನು ಮಾರ್ಗದರ್ಶಿಸಿ ನೋಡಿಕೊಳ್ಳುತ್ತಿದ್ದಾನೆ. ಜೀವನದಲ್ಲಿ ಬರುವ ಎಲ್ಲಾ ಸನ್ನಿವೇಶಗಳಿಗೂ ಹೊಂದಿಕೊಂಡು ಪ್ರಶಾಂತವಾಗಿರಬಲ್ಲೆ. ದೇವರು ದೊಡ್ಡವನು, ಋಷಿಗಳ ಮತ್ತು ಗುರೂಜಿಯವರ ಮೂಲಕ ನಮ್ಮನ್ನು ಮಾರ್ಗದರ್ಶಿಸುತ್ತಿರುವನು. ಈ ಧ್ಯಾನಮಾರ್ಗದಲ್ಲಿರುವುದು ನನ್ನ ಅದೃಷ್ಟ.

– ಪ್ರತಿಮಾ ವಡ್ಗಾಮ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ